ಶ್ರೀ ಪಿ. ರಾಂದೇವ್.— ಆ ಬಗ್ಗೆ ಕೂಡ ಹೇಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸದಸ್ಯರಾದ ರಾಂದೇವ್‌ರವರು ಎಲ್ಲಾ ಖಾತೆಗಳ ಬಗ್ಗೆಯೂ ಹೇಳುತ್ತಿದ್ದಾರೆ. ಅವರು ಒಂದು ತರಹ ಖಾತಾರಹಿತ ಮಂತ್ರಿಗಳು ಇದ್ದ ಹಾಗೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರಾದ ರಾಂದೇವ್‌ರವರು ತಮ್ಮ ಭಾಷಣವನ್ನು ಸದ್ಯಕ್ಕೆ ನಿಲ್ಲಿಸಿ. ಈಗ ಪಾವಗಡದ ಬಗ್ಗೆ ಚರ್ಚೆಯನ್ನು ಶುರು ಮಾಡೋಣ.

ಪಾವಗಡದಲ್ಲಿ ನಡೆದಂತ ಶಿಶು ಹತ್ಯ ಪ್ರಕರಣಗಳು

† ಶ್ರೀ ಎಂ. ವೀರಪ್ಪಮೊಯಿಲಿ. (ಕಾರ್ಕಳ)— ಸನ್ಮಾನ್ಯ ಉಪಾಧ್ಯಕ್ಷರೆ, ಪಾವಗಡ ತಾಲ್ಲೂಕಿನಲ್ಲಿ ಸುಮಾರು ೨೮ ಏಪ್ರಿಲ್ ೧೯೮೩ರಿಂದ ಮೊನ್ನೆ ಅಂದರೆ ದಿನಾಂಕ ೧೭ ಆಗಸ್ಟ್ ೧೯೮೩ರವರೆಗೆ ನಡೆದಂತಹ ಶಿಶುಹತ್ಯೆ ಪ್ರಕರಣ ಎಲ್ಲರ ಗಮನವನ್ನು ಮತ್ತು ಎಲ್ಲಾ ಜನತೆಯನ್ನು ತಲ್ಲಣಗೊಳಿಸುವಂತಹ ಪ್ರಸಂಗಗಳು. ಅದರಲ್ಲಿ ಪ್ರಾಮುಖ್ಯವಾದ ಕೆಲವು ವಿಚಾರಗಳು ಬಂದಿವೆ. ಈಗಾಗಲೇ ತಿಂಗಳಿನಿಂದ ಈ ವಿಚಾರವನ್ನು ಪೋಲೀಸ್ ಇಲಾಖೆಯ ಅಧಿಕಾರಿಗಳು ಅರಣ್ಯ ಇಲಾಖೆಯ ಅಧಿಕಾರಿಗಳು ವಿಚಾರ ಮಾಡುತ್ತಾ ಬಂದರು. ಒಂದು ಹಂತದಲ್ಲಿ ಅರಣ್ಯ ಇಲಾಖೆಯವರು ಒಂದು ಅಭಿಪ್ರಾಯವಾದರೆ ಮತ್ತೊಂದು ಹಂತದಲ್ಲಿ ಪೋಲೀಸ್ ಇಲಾಖೆಯವರದು ಮತ್ತೊಂದು ಅಭಿಪ್ರಾಯವಾಗಿದೆ. ಈ ರೀತಿಯಾದ ವಿಭಿನ್ನ ವಾದಗಳನ್ನು, ವಿಚಾರಗಳನ್ನು ಅವರು ಹೇಳುತ್ತಾ ಬಂದರು. ದಿನಾಂಕ ೨೮-೪-೧೯೮೩ರಲ್ಲಿ ದಾಸರಮ್ಮಹಳ್ಳಿಯ ಪಾಪಮ್ಮ ಎನ್ನುವ ೪ ವರ್ಷದ ಹೆಣ್ಣು ಹುಡುಗಿಯ ಹತ್ಯೆಯಾಗಿದೆ, ದಿನಾಂಕ ೮-೫-೧೯೮೩ರಲ್ಲಿ ಬೊಮ್ಮಗಾನಹಳ್ಳಿಯ ಶ್ರೀಮತಿ ಎಂಬ ೮ ತಿಂಗಳ ಹೆಣ್ಣುಮಗುವಿನ ಹತ್ಯೆಯಾಗಿದೆ ಈ ಇಬ್ಬರೂ ಕೂಡ ಹೆತ್ತವರಿಗೆ ಒಬ್ಬರೊಬ್ಬರೇ ಮಕ್ಕಳು. ದಿನಾಂಕ ೧೬-೫ ೧೯೮೩ರಂದು ಕಣಿವೇನಹಳ್ಳಿಯ ಜನತಾ ಕಾಲೋನಿಯಲ್ಲಿ ಏಕಮಾತ್ರ ಪುತ್ರಿ ನಾಗವೇಣಿ ಎಂಬ ಬಾಲಕಿಯ ಕಾಲನ್ನು ಕತ್ತರಿಸಿ ಒಂದು ಮೈಲು ದೂರದಲ್ಲಿ ಬಿಸಾಕಿ ಒಂದೂವರೆ ಅಡಿ ಆಳದಲ್ಲಿ ಹೂಳಲಾಗಿದೆ. ಪ್ರಾಣಿಗಳು ಹೂತದ್ದು ಎಂದು ಕತೆ. ದಿನಾಂಕ ೨೩-೫-೧೯೮೩ರಂದು ವಠಾರದಲ್ಲಿ ಸಾಲಾಗಿ ಮಲಗಿದ್ದ ಆರು ಮಂದಿಯನ್ನು ಬಿಟ್ಟು ಕಡೆಯಲ್ಲಿ ಗೋಡೆಯ ಪಕ್ಕದಲ್ಲಿ ಮಲಗಿದ್ದ ಆದಿಲಕ್ಷ್ಮಮ್ಮ ಎಂಬ ಹೆಣ್ಣು ಮಗುವಿನ ಕೊಲೆಯಾಯಿತು. ದಿನಾಂಕ ೨೬-೭-೧೯೮೩ರಂದು ಮಂಗಳವಾರ ಒಂದು ಗಂಟೆ ಸಮಯದಲ್ಲಿ ಪಾವಗಡಕ್ಕೆ ೩ ಕಿಲೋಮೀಟರ್ ದೂರವಿರುವ ಎಮ್ಮನಬೆಟ್ಟ ಎಂಬಲ್ಲಿ ವೆಂಕಟಸುಬ್ಬಮ್ಮ ಎಂಬ ಹೆಣ್ಣುಮಗಳ ಹತ್ಯೆಯಾಯಿತು.

ಈ ಪ್ರಕರಣದಲ್ಲಿ ಕೊಲೆಯಾದ ದಿನ ಬೆಳಿಗ್ಗೆ ೮-೩೦ ಗಂಟೆಗೆ ನೋಡಿದರೆ ಮನೆಯಿಂದ ಸ್ವಲ್ಪ ದೂರದಲ್ಲಿ ಮನುಷ್ಯನ ಎರಡು ಹೆಜ್ಜೆಗಳು ಬಿದ್ದಿರುವುದು ಕಂಡು ಬಂದಿದೆಯೆಂದು ಗೊತ್ತಾಗಿದೆ, ಇದರ ಜೊತೆಗೆ ೨೬-೭-೧೯೮೩ರಂದು ಮನುಷ್ಯನ ಹೆಜ್ಜೆಗಳು ಇದ್ದದ್ದು ಕಂಡು ಬಂದಿದೆ. ಮತ್ತು ಮಗುವಿನ ಹೆಜ್ಜೆಗಳೂ ಕೂಡ ಕಂಡು ಬಂದಿವೆ. ಆ ಮಗುವನ್ನು ಸ್ವಲ್ಪ ದೂರ ನಡೆಸಿಕೊಂಡು ಹೋಗಿರುವುದೂ ಕೂಡ ಕಂಡು ಬಂದಿದೆ. ಇಲ್ಲಿ ಮತ್ತೊಂದು ವಿಷಯವೆಂದರೆ, ಅಲ್ಲಿ ತೆಂಗಿನ ನಾರು ಸಹ ಇದ್ದದ್ದು ಕಂಡು ಬಂದಿದೆ. ಮತ್ತು ರಕ್ತದ ಕಲೆಗಳು ಕೂಡ ಇದ್ದದ್ದು ಕಂಡು ಬಂದಿದೆ. ಮತ್ತೊಂದು ಕುತೂಹಲಕಾರಿಯಾದ ವಿಷಯವೆಂದರೆ, ತಲೆ ಕತ್ತರಿಸಿ ಹಾಕಲಾಗಿದೆ. ಒಂದು ಕಡೆ ಜಡೆಯನ್ನೂ ಸಹ ಕತ್ತರಿಸಲಾಗಿದೆ ಮತ್ತು ಅಲ್ಲಿ ಮನುಷ್ಯನ ಹೆಜ್ಜೆಗಳೂ ಸಹ ಇದ್ದು ತಲೆ ಕತ್ತರಿಸಿ ಜಡೆಯನ್ನು ಕತ್ತರಿಸಿರುವುದು ಕಂಡು ಬಂದಿದೆ. ಮತ್ತು ಮಗುವಿನ ಕರಳೂ ಕೂಡ ಕತ್ತರಿಸಿ ಹಾಕಲಾಗಿದೆ. ಮತ್ತೆ ದೇಹ ಒಂದು ಕಡೆ, ಕೈ ಕಾಲುಗಳು ಮತ್ತೊಂದು ಕಡೆ ಇದ್ದದ್ದು ಕಂಡುಬಂದಿದೆ. ಇದೆಲ್ಲಾ ೨೬-೭-೧೯೮೩ರಂದು ನಡೆದ ವಿದ್ಯಮಾನ. ಮತ್ತೆ ೬ನೇ ಪ್ರಕರಣದಲ್ಲಿ ಅಂದರೆ ೧೬-೮-೧೯೮೩ರಂದು ಮಧ್ಯಾಹ್ನ ೩-೩೦ ಗಂಟೆಗೆ ಗೊಲ್ಲರ ಕದಿರಪ್ಪನವರ ವೀರಪ್ಪ ಎಂಬುವರ ಕೊಲೆಯಾಗಿದೆ. ಆದರೆ ಆ ದಿವಸ ಪ್ರಾಣಿಗಳ ಹೆಜ್ಜೆ ಇರಲಿಲ್ಲ. ನೆಲ ರಕ್ತವಾಗಿತ್ತು. ಅಲ್ಲಿ ರಕ್ತವಾಗಿದ್ದು ಕಂಡುಬಂದಿದೆ. ಆದರೆ ಆವರ ಹಿಂದೆ ಮತ್ತು ಮುಂದೆ ಎಲ್ಲಿಯೂ ಕೂಡ ರಕ್ತದ ಕಲೆಯಾಗಿದ್ದು ದಾರಿಯಲ್ಲಿ ಕಾಣಲಿಲ್ಲ. ಅಲ್ಲಿ ಯಾವ ಪ್ರಾಣಿ ಹೆಜ್ಜೆ ಕೂಡ ಕಾಣಲಿಲ್ಲ. ಮತ್ತು ಆ ಮಗು ಹಾಕಿಕೊಂಡಿದ್ದ ಬಟ್ಟೆ ಸಂಪೂರ್ಣವಾಗಿ ರಕ್ತಮಯವಾಗಿದೆ. ಆದರೆ ಅದು ಹೇಗಿತ್ತೋ ಶರ್ಟ್ ಮನುಷ್ಯ ತೆಗೆದರೆ ಮಾತ್ರ ಮಗುಚಿ ಬೀಳುತ್ತದೆ ಪ್ರಾಣಿ ತೆಗೆದರೆ ಮಗುಚಿ ಬೀಳುವುದಿಲ್ಲ. ಅ ರೀತಿಯೇ ಇದೆ. ಅ ಸ್ಟ್ಯಾಕ್ ಏನೂ ಹರಿದಿಲ್ಲ. ಚಿಂದಿ ಚಿಂದಿಯಾಗಿಲ್ಲ. ಆ ರೀತಿ ಮಾಡುವುದಕ್ಕೆ ಮನುಷ್ಯನೊಬ್ಬನಿಂದ ಮಾತ್ರ ಸಾಧ್ಯವೇ ವಿನಹಃ

ಪ್ರಾಣಿಗಳಿಂದ ಸಾಧ್ಯವಿಲ್ಲ. ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತೆ ಏಳನೆಯ ಘಟನೆಯಲ್ಲಿ ಗೊಲ್ಲರ ಪಾರ್ವತಮ್ಮ ಎಂಬ ೫ ವರ್ಷದ ಮಗುವಿನ ಕೊಲೆಯಾಗಿದೆ. ಆಕೆಯ ಕತ್ತಿನ ಬಲಭಾಗದಲ್ಲಿ ಚೂಪಾದ ಗಾಯವಾಗಿದೆ. ಮತ್ತೆ ಬೆನ್ನಿನ ಹಿಂಭಾಗದಲ್ಲಿ ಗಾಯವಾಗಿದೆ. ಈ ರೀತಿಯ ಗಾಯವನ್ನು ಮಾಡಲು ಪ್ರಾಣಿಗಳಿಂದ ಸಾಧ್ಯವಿಲ್ಲ. ಮತ್ತೆ ೮ನೇ ಘಟನೆಯಲ್ಲಿ ನಡೆದಂತಹ ವಿದ್ಯಮಾನಗಳನ್ನು ನಾವು ಗಮನಿಸುವುದಾದರೆ, ಸುಮಾರು ೩-೦೦ ಗಂಟೆಯ ಸಮಯ, ಊಟ ಮಾಡಿ ಗಂಡ ಮತ್ತು ಹೆಂಡತಿ ಮಲಗಿದ್ದಾಗ ಆಕೆಯ ಪಕ್ಕ ಮಲಗಿದ್ದ ತನ್ನ ಮಗ ಅಸ್ಲಾಂ ಎಂಬುವನ ಕೊಲೆಯಾಗಿದೆ. ಈ ಕೊಲೆ ಬಹಳ ನಿಗೂಢವಾಗಿದೆ. ಎಲ್ಲಾ ೮ ಘಟನೆಗಳಲ್ಲಿಯೂ ೫ ಜನ ಹೆಣ್ಣು ಮಕ್ಕಳು, ಅದೂ ಏಕಮಾತ್ರ ಪುತ್ರಿಯರು ಬಲಿಯಾಗಿದ್ದಾರೆ. ಆ ಎಲ್ಲಾ ೫ ಶವಗಳ ಪತ್ತೆಯಾಗಿಲ್ಲ. ಆದರೆ ಎರಡು ಗಂಡುಮಕ್ಕಳ ಶವಗಳು ಮಾತ್ರ ಸಿಕ್ಕಿವೆ. ಇದರಲ್ಲಿ ಪ್ರಾಣಿಗಳು ಕೊಲೆ ಮಾಡಿದ್ದರೆ ಮನುಷ್ಯರನ್ನು ಕಚ್ಚಿಕೊಂಡು ಎಳೆದುಕೊಂಡು ಹೋಗುತ್ತಿದ್ದವು. ಆದರೆ ಮನುಷ್ಯರನ್ನು ಎತ್ತಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಸುಮಾರು ಎಂಟು ಘಟನೆಗಳಲ್ಲಿಯೂ ಒಂದು ಶವವನ್ನು ಕೂಡ ಕಚ್ಚಿಕೊಂಡು ಹೋಗಿರುವುದಾಗಲಿ ಅಥವಾ ಎಳೆದುಕೊಂಡು ಹೋಗಿರುವುದಾಗಲಿ ಕಂಡು ಬಂದಿಲ್ಲ. ಮಾನ್ಯ ಅಧ್ಯಕ್ಷರೇ ಇದುವರೆಗೂ ಸುಮಾರು ೮ ಘಟನೆಗಳು ನಡೆದಿವೆ. ಆದರೆ ೧೭ನೇ ತಾರೀಖು ನಡೆದಿರುವ ಘಟನೆಯ ನಂತರ ಪೋಲೀಸ್ ನಾಯಿಗಳನ್ನು ಉಪಯೋಗಿಸಿದ್ದಾರೆ. ಆ ಪೋಲೀಸ್ ನಾಯಿಗಳು ಮೊದಲು ಸಿನಿಮಾ ಟಾಕೀಸ್ ಹತ್ತಿರ ಹೋಗಿವೆ. ಇನ್ನೊಂದು ನಾಯಿ ದೇವಸ್ಥಾನಕ್ಕೆ ಹೋಗಿ, ನೇರವಾಗಿ ಪೇಟೆಗೆ ಹೋಗಿ, ಆ ನಂತರ ಬಸ್ ಸ್ಟ್ಯಾಂಡಿಗೆ ಹೋಗಿ ಮತ್ತೆ ವಾಪಸ್ಸು ಬಂದಿದೆ. ಮತ್ತೆ ಅದೇ ನಾಯಿಗಳು ತಿಮ್ಮಾಪುರ ಬೆಟ್ಟದ ತನಕ ಹೋಗಿ ಅಲ್ಲಿ ನೋಡಿ ಮತ್ತೆ ವಾಪಸ್ಸು ಬಂದಿವೆ. ಇಷ್ಟೆಲ್ಲಾ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನಮಗೆ ಇದುವರೆಗೆ ಯಾವುದೂ ಕೂಡ ಸ್ಪಷ್ಟವಾಗಿ ನಡೆದುದ್ದು ಕಂಡುಬಂದಿಲ್ಲ. ಆದರೆ ಇಲ್ಲಿ ಏನು ನಡೆದಿದೆಯೆಂಬ ಸಂಪೂರ್ಣ ಮಾಹಿತಿ ಬೇಕಾದರೆ ಶ್ರೀಮಾನ್ ಮಹಮದ್ ಸಾಹೇಬ್‌ರವರು ಮೊನ್ನೆ ಮಧ್ಯಾಹ್ನ ಸ್ವತಃ ನೋಡಿ ಹೇಳುತ್ತಾರೆ. ಅದು ಏನೆಂದರೆ ನಾಲ್ಕು ಕಾಲಿನಲ್ಲಿ ಓಡುತ್ತಿದ್ದ ಪ್ರಾಣಿ ಸ್ವಲ್ಪ ದೂರದಲ್ಲಿ ಹೋಗಿ ಮತ್ತೆ ಎರಡೇ ಕಾಲಿನಲ್ಲಿ ಓಡುತ್ತಿತ್ತು ಎಂದು ಹೇಳುತ್ತಾರೆ. ಮತ್ತೆ ಆತನು ಆ ಪ್ರಾಣಿಯನ್ನು ಕಲ್ಲಿನಲ್ಲಿ ಹೊಡೆದಾಗ ಅವರ ಏಟಿಗೆ ತಪ್ಪಿಸಿಕೊಂಡು ಹೋಗಿದೆಯೆಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ನಗಬಾರದು. ಇದು ಬಹಳ ಗಂಭೀರವಾದಂಥ ಪ್ರಶ್ನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ನಗುತ್ತಿಲ್ಲ. ನಿಮಗೆ ಆ ರೀತಿಯಾಗಿ ಭಾಸವಾದರೆ ನಾನು ಏನು ಮಾಡುವುದಕ್ಕೆ ಸಾಧ್ಯವಿದೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ವಿಷಯದ ಬಗ್ಗೆ ಗಂಭೀರತೆಯನ್ನು ತೋರಿಸಿದರೆ ಸಾಕು. ನಾನು ಇದುವರೆಗೂ ಈ ವಿಷಯದ ಬಗ್ಗೆ ಸಂಗ್ರಹ ಮಾಡಿದಂಥ ಸಿದ್ಧಾಂತದ ವೃತ್ತಾಂತವನ್ನು ಹೇಳುತ್ತಿದ್ದೇನೆ. ಆದರೆ ನಿಮಗೆ ಪೋಲೀಸ್ ಇಲಾಖೆ ಇದೆ. ಅವರು ನಿಮಗೆ ಎಲ್ಲಾ ವಿಷಯಗಳನ್ನು ತಿಳಿಸುತ್ತಾರೆ. ಆದರೆ ನಮಗೆ ಅಂತಹ ವಿಷಯಗಳನ್ನು ಸಾರ್ವಜನಿಕರಿಂದ ಬರುತ್ತವೆ ಮೊನ್ನೆಯ ಘಟನೆಯಲ್ಲಿ ಹೆಚ್ಚು ವಿಚಾರಗಳು ಬೆಳಕಿಗೆ ಬಂದಿವೆ. ಆ ಮೌಲ್ಯಗಳ ಆಧಾರದ ಮೇಲೆ ನಾವು ಮಾತನಾಡ ಬೇಕಾಗುತ್ತದೆ. ನಾನು ಡೈರೆಕ್ಟ್ ಎವಿಡೆನ್ಸ್‌ನಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇದಲ್ಲ ಓಡಿಸಿಕೊಂಡು ಹೋದಾಗ ಇನ್ನೂ ಇಬ್ಬರು ಮುಖವಾಡ ಹಾಕಿದಂತಹ ವ್ಯಕ್ತಿಗಳು ಕಂಡುಬಂದರು. ಅವರನ್ನು ಓಡಿಸಿಕೊಂಡು ಹೋದಾಗ ಅವರು ಗಾಯಗೊಂಡ ಮಗುವನ್ನು ಬಿಟ್ಟು ಓಡಿಹೋದರು. ಓಡಿಸಿಕೊಂಡು ಹೋದಾಗ ಆ ಪ್ರಾಣಿ ಮಾನವ ಕಲ್ಲು ಒಗೆದಿದ್ದಾನೆ. ಆ ಕಲ್ಲು ಬಡಿದು ಮಹಮ್ಮದ್ ಗಾಯಗೊಂಡಿದ್ದಾನೆ. ಅವನಿಗೆ ಗಾಯವಾದಾಗ ಇದನ್ನು ಇನ್ನೂ ಐದು ಜನರು ಕಣ್ಣಾರೆ ಕಂಡಿದ್ದಾರು. ಅವರು ಮನುಷ್ಯರ ಹಾಗೆ ಕಾಣಿಸುತ್ತಿದ್ದರು. ಎಂದು ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಪ್ರತ್ಯಕ್ಷ ಸಾಕ್ಷಿಗಳು 'ಮೂರು ಮಂದಿಯೂ ಕಪ್ಪು ಮುಖವಾಡ ಹಾಕಿಕೊಂಡಿದ್ದಾರು. ಅವರನ್ನು ತಾವು ಕಣ್ಣಾರೆ ಕಂಡಿದ್ದೇವೆ. ಎಂದು ಹೇಳಿಕೆ ನೀಡಿದ್ದ ಸಂದರ್ಭದಲ್ಲಿ ಅರಣ್ಯ ಇಲಾಖೆಯವರಿಗೆ ಮತ್ತು ಪೋಲೀಸ್ ಇಲಾಖೆಯವರಿಗೆ ಈ ವಿಚಾರದಲ್ಲಿ ಚರ್ಚೆಯಾಗಿದೆ. ಅವರಲ್ಲಿ ಮಾತಿಗೆ ಮಾತು ಬೆಳೆದು ಇಬ್ಬರೂ ಜಗಳವಾಡಿಕೊಂಡಿದ್ದಾರೆ. ಅದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ

ಏನೆಂದರೆ, ತಾವು ಇದನ್ನು ಮುಕ್ತ ಮನಸ್ಸಿನಿಂದ ವಿಚಾರಣೆ ಮಾಡಿಸುತ್ತೀರಾ ಎಂಬುದಾಗಿದೆ. ತೆರೆದ ಮನಸ್ಸಿನಿಂದ ತಾವು ಇದನ್ನು ವಿಚಾರಣೆ ಮಾಡಿಸುತ್ತೀರಿ ಎಂಬ ವಿಶ್ವಾಸ ನನಗಿದೆ. ಇದು ಒಂದು ಪಕ್ಷಕ್ಕೆ ಅಥವಾ ವಿಚಾರ ಬೇಧಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಇದನ್ನು ತಾವು ತುಲನೆ ಮಾಡಬೇಕು. ಏಕೆಂದರೆ, ಎರಡೂ ಇಲಾಖೆಯವರಿಗೆ ಜಗಳವಾಗಿದೆ. ಇದು ಅವರಿಬ್ಬರ ನಡುವೆ ಮಾತ್ರ ಆಗಿಲ್ಲ. ಅಗ ಸಾಕಷ್ಟು ಜನಸಮುದಾಯವೂ ಅಲ್ಲಿತ್ತು.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಸಾಕ್ಷಿಗಳು ಹೇಳಿದ ರೀತಿಯಲ್ಲಿ ಬರೆದುಕೊಳ್ಳುವುದು ಬೇಡ ಎಂದು ಪೋಲೀಸ್ ಇಲಾಖೆಯವರು ಹೇಳಿದ್ದಾರೆ. ಅದನ್ನು ಬರೆದುಕೊಳ್ಳಬೇಕೆಂದು ಅರಣ್ಯ ಇಲಾಖೆಯವರು ಒತ್ತಾಯ ಮಾಡಿದ್ದಾರೆ ಆಂದು ಮೂರು ಗಂಟೆಗೆ ಬೆಂಗಳೂರಿನಿಂದ ಪತ್ರಿಕಾಕರ್ತರು ಅಲ್ಲಿಗೆ ಹೋಗಿದ್ದರು. ಅಲ್ಲಿದ್ದಂತಹ ಸಾರ್ವಜನಿಕರ ಎದುರು ಪ್ರತ್ಯಕ್ಷವಾಗಿ ನೋಡಿದ್ದವರು ಹೇಳಿಕೆಯನ್ನು ಕೊಟ್ಟಿದ್ದಾರೆ. 'ಇದು ಮನುಷ್ಯ ಪ್ರಾಣಿಯಿಂದಲೇ ಆದದ್ದು, ಒಬ್ಬನೊಡನೆ ಇನ್ನಿಬ್ಬರು ಆತನ ಸಹವರ್ತಿಗಳು ಇದ್ದರು' ಎಂದು ಸ್ಪಷ್ಟೀಕರಣವನ್ನು ನೀಡಿದ್ದಾರೆ.

ಆದರೆ, ಮೂರು ಗಂಟೆಯಾದ ಮೇಲೆ ಮಹಮದ್ ಒಬ್ಬನನ್ನೇ ಪೋಲೀಸಿನವರು ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಎರಡು ಗಂಟೆ ಕಾಲ ಆತನನ್ನು ಇರಿಸಿಕೊಂಡಿದ್ದರು. ಅಲ್ಲಿ ಜವಾಬ್ದಾರಿಯುತ ಅಧಿಕಾರಿಗಳು ಇದ್ದರು. ಉನ್ನತ ಅಧಿಕಾರಿಗಳು ಕೂಡ ಇದ್ದರು ಅಲ್ಲಿ ಆತನಿಗೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಹಿಂಸೆ ಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ದಾಖಲೆಗಳಿಲ್ಲ. ಇದರ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಹೊರಗೆ ಬಂದ ಮೇಲೆ ಮಹಮ್ಮದ್ ಸಂಪೂರ್ಣವಾಗಿ ಬಿಳಿಚಿಕೊಂಡಿದ್ದ ಮತ್ತು ತುಂಬಾ ಹೆದರಿಕೊಂಡಿದ್ದ. ಕೆಲವು ಗಂಟೆಗಳ ಹಿಂದೆ ಆತನು ನೀಡುತ್ತಿದ್ದ ವಿವರಣೆಯನ್ನು ಆತನ ಹೆಂಡತಿ ಮತ್ತು ಇತರ ಪ್ರತ್ಯಕ್ಷದರ್ಶಿಗಳು ಸಮರ್ಥನೆ ಮಾಡುತ್ತಿದ್ದರು. ಆದರೆ, ಹೊರಗಡೆ ಬಂದ ಮೇಲೆ ಆತನ ವಿವರಣೆ ಸಂಪೂರ್ಣವಾಗಿ ಬದಲಾಗಿ ಬಿಟ್ಟಿದೆ. ಎಷ್ಟು ಹೇಳಬೇಕೋ, ಅಷ್ಟು ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. He was practically to say the least tutored. Who has tutored ? I am not here to say that I am not a witness. ಇಂತಿಷ್ಟೇ ಹೇಳಬೇಕು, ಹೆಚ್ಚು ಹೇಳಬಾರದು, ಕಡಿಮೆ ಹೇಳಬಾರದು ಎಂಬ ಆತನ ವರ್ತನೆಯನ್ನು ಅಲ್ಲಿದ್ದವರು ನೋಡಿದ್ದಾರೆ ! ಪತ್ರಿಕಾಕರ್ತರು ಆವನನ್ನು ನೋಡಿದ್ದಾರೆ. ಸಾರ್ವಜನಿಕರು ಆತನ ಹತ್ತಿರ ಮಾತನಾಡಿದ್ದಾರೆ. ಆದರೆ, ಹಿಂದೆ ಆತ ಮತ್ತು ಆತನ ಹೆಂಡತಿ ಖತಿಬಾಬಿ ಮತ್ತು ಉಳಿದ ಐದು ಮಂದಿ ಪ್ರತ್ಯಕ್ಷದರ್ಶಿಗಳು ಅದು ಮನುಷ್ಯರಿಂದಲೇ ಆಗಿದ್ದು ಎಂದು ಹೇಳುತ್ತಿದ್ದವರು ಐದು ಗಂಟೆ ಆದ ಮೇಲೆ ಇಲ್ಲ, ಆದು ಪ್ರಾಣಿಯಿಂದಲೇ ಆದದ್ದು. ಎಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಬೇರೆ ಬೇರೆ ರೀತಿಯಾಗಿ ಊಹಾಪೋಹಗಳು ಇವೆ ! ನಾವು ಹೇಳಿದ ಹಾಗೆ ಹೇಳಿದರೆ ಮಾತ್ರ ಐದು ಸಾವಿರ ರೂಪಾಯಿ ಸಿಗುತ್ತದೆ. ಇಲ್ಲದಿದ್ದರೆ ಐದು ಸಾವಿರ ರೂಪಾಯಿ ಹೋಗಿ ಬಿಡುತ್ತದೆ. ಎಂದು ಆತನಿಗೆ ಹೇಳಲಾಗಿದೆ ಎನ್ನುವ ವದಂತಿಗಳು ಇವೆ. Lot of versions are there. I don't know what is actually the truth as far as the rumours are concerned ಹಾಗೆಯೇ ವೈದ್ಯರು ಕೂಡ ಅದ್ಯರು ಕೂಡ ಅದೇ ರೀತಿಯಲ್ಲಿ ಅಂದರೆ ಪ್ರಾಣಿಗಳಿಂದಲೇ ಈ ಹತ್ಯೆ ಆದದ್ದು ಎಂದು ಸರ್ಟಿಫಿಕೇಟ್ ಕೊಡಬೇಕು ಎಂದು ಅವರನ್ನು ಒತ್ತಾಯಿಸಲಾಗಿದೆ ಎಂಬ ವರ್ತಮಾನ ನಮಗೆ ಬಂದಿದೆ. ನಾವು ಕೂಡ ಇದರಲ್ಲಿ ಯಾವುದನ್ನೂ ಖಂಡಿತವಾಗಿ ಹೇಳುವುದಕ್ಕೆ ಬರುವುದಿಲ್ಲ. ತಮಗೆ ಗೊತ್ತಿದೆ, ನಾವೂ ಆಡಳಿತ ನಡೆಸಿದವರು. ಆಡಳಿತ ಯಂತ್ರ ಕೆಲವು ಸಲ ಹೇಗೆ ಇರುತ್ತದೆ ಎಂಬುದು ನಮಗೆ ಗೊತ್ತಿದೆ. ಕೆಲವು ಸಲ ಪ್ರತಿಷ್ಠೆಯ ಮನೋಭಾವನೆ ಬಂದುಬಿಡುತ್ತದೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದನ್ನು ಗಮನಿಸಬೇಕು. ಇದನ್ನು ಕೂಲಂಕಷವಾಗಿ ಸ್ವತಃ ಅವರೇ ಪರಿಶೀಲಿಸಿ ನೋಡಬೇಕು. ನಿಜವಾಗಿ ಏನು ಈ ಅಮಾನುಷ ಕೃತ್ಯ, ಶಿಶುಹತ್ಯೆ ನಡೆದಿದೆ, ಇದು ಪ್ರಾಣಿ ಮಾನವರಿಂದಲೇ ಆಗಿದೆ. ಈ ದ್ವಂದ್ವ ಬರೇ ಸಾರ್ವಜನಿಕರಲ್ಲಿ ಉಳಿದಿಲ್ಲ, ಈ ದ್ವಂದ್ವ ಪ್ರಮುಖವಾಗಿ ಪೋಲೀಸಿನವರಿಗೂ ಮತ್ತು ಅರಣ್ಯ ಇಲಾಖೆಯವರಿಗೂ ಬಂದಿದೆ. ಮಾತ್ರವಲ್ಲ, ಈ ಅನುಮಾನ ಸಾರ್ವಜನಿಕರಲ್ಲಂತೂ ಈಗಾಗಲೇ ಬಂದುಬಿಟ್ಟಿದೆ. ಏಕೆಂದರೆ, ಅರಣ್ಯ ಇಲಾಖೆಯವರು ಯಾವ ಧೋರಣೆಯನ್ನು ಕಂಡುಕೊಂಡಿದ್ದಾರೆ ಎಂದರೆ ಇದು ಪ್ರಾಣಿಗಳಿಂದ ಆಗಿಲ್ಲ,

ಮನುಷ್ಯರಿಂದಲೇ ಆಗಿದೆ ಎಂಬುದು ಅವರ ಅಭಿಪ್ರಾಯ. ಆದರೆ ಪೋಲಿಸಿನವರು ಇದು ಪ್ರಾಣಿಗಳಿಂದಲೇ ನಡೆದಿದೆ ಎಂದು ತಮ್ಮ ಹೇಳಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದಕ್ಕೆ ಪೋಷಕವಾಗಿ ಘಟನೆಗಳು ಕೂಡ ನಡೆದಿವೆ. ಅದರಂತೆ ಪೋಲೀಸಿನವರ ಪ್ರಕಾರ ಎರಡು ಕತ್ತೆ ಕಿರುಬಗಳು ಲಾರಿ ಅಪಘಾತದಲ್ಲಿ ಸತ್ತಿದ್ದವು. ಇಂತಹ ಘಟನೆಗಳು ನಾಲ್ಕೈದು ಆದ ಮೇಲೆ ಎರಡು ಕತ್ತೆ ಕುರುಬಗಳು ಸತ್ತು ಹೋದವು. ಅಧ್ಯಕ್ಷರೇ, ಇದೇನೂ ಕತೆಯಲ್ಲ. ಕತ್ತೆ ಕುರುಬ ಸತ್ತಿದ್ದಕ್ಕೆ ಏನು ಮಾಡಿದರು ಎಂದರೆ ಮೆರವಣಿಗೆ ಮಾಡಿದರು. ಮಕ್ಕಳನ್ನು ಹತ್ಯೆ ಮಾಡತಕ್ಕಂಥ ಕತ್ತೆಕಿರುಬ ಎಂದು ತಿಳಿದುಕೊಂಡು ಮೆರವಣಿಗೆ ಮಾಡಿದರು. It is something like that. I am blaming officers at Bangalore. I am telling you about what is happening locally.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ನೀವು ಕತ್ತೆ ಕುರುಬ ಎಂದು ಹೇಳುತ್ತಿದ್ದೀರಿ. ಅದು ಕುರುಬ ಅಲ್ಲ, ಕತ್ತೆಕಿರುಬ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ಅದು ಕತ್ತೆ ಕಿರುಬವೇ ಸರಿ. ನಾಉ ಮನೆಯಲ್ಲಿ ಮಾತನಾಡುವುದು ತುಳು ಭಾಷೆಯನ್ನು. ನಮ್ಮ ಕನ್ನಡ ಬಹಳ ಶುದ್ಧವಾದ ಕನ್ನಡ. ಕತ್ತೆ ಕಿರುಬ ಎಂದೇ ನಾನು ಹೇಳಲಿಕ್ಕೆ ಹೊರಟಿದ್ದು.

ಅಧ್ಯಕ್ಷರು.—ನೀವು ಕವಿತೆ ಎಲ್ಲಾ ಬರೆಯುತ್ತಿದ್ದೀರಿ. ಸರಿಯಾಗಿ ಭಾಷೆಯನ್ನು ಬಳಸದಿದ್ದರೆ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಕಿರುಬ ಅಂತ ಹೇಳುವುದು ನೂರಕ್ಕೆ ನೂರರಷ್ಟು ಶುದ್ಧವಾದ ಕನ್ನಡ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಬಹುಶಃ ಇದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡಕ್ಕೆ ಇರತಕ್ಕ ವ್ಯತ್ಯಾಸ ಇರಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಭಾಷೆ ಬಹಳ ಶುದ್ಧವಾದ ಕನ್ನಡ. ನಾನು ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಈ ಎರಡು ಕತ್ತೆ ಕಿರುಬಗಳಲ್ಲಿ ಒಂದು ಆಕ್ಸಿಡೆಂಟ್‌ನಿಂದ ಸತ್ತುಹೋಯಿತು. ಇನ್ನೊಂದನ್ನು ಪೋಲೀಸರು ಹೊಡೆದರು, ನಂತರ ಅವುಗಳ ಮೆರವಣಿಗೆ ಆಯಿತು. ಇದೇನೂ ಕಪೋಲಕಲ್ಪಿತ ವಿಚಾರ ಅಲ್ಲ. ಪತ್ರಿಕೆಯಲ್ಲಿ ಕೂಡ ಫೋಟೊ ಬಂದಿದೆ. ಪೋಲೀಸರು ಶಿಶುಹತ್ಯೆ ಮಾಡಿದಂತಹ ಕತ್ತೆ ಕಿರುಬ ಸಿಕ್ಕಿತು ಎಂದುಕೊಂಡು ಅದನ್ನು ಕೊಂದು, ಮೆರವಣಿಗೆ ಮಾಡಿ ಪ್ರದರ್ಶನಕ್ಕೆ ಇಟ್ಟರು. ಆದರೆ ಇದರಿಂದ ವಾದವಿವಾದ ಪ್ರಾರಂಭವಾಯಿತು. ಅರಣ್ಯ ಇಲಾಖೆಯವರು 'ಇಲ್ಲ. ಇದು ಮಾನವನಿಂದಲೇ ಆಗಿದ್ದು ಪ್ರಾಣಿಗಳಿಂದ ಆದದ್ದು ಅಲ್ಲ' ಎಂದು ಪಟ್ಟು ಹಿಡಿದು ಕುಳಿತರು. ಆದರೆ ಈ ಘಟನೆ ಆದ ಮೇಲೆ ಕೂಡ ಮೂರು–ನಾಲ್ಕು ಮಕ್ಕಳು ತೀರಿಕೊಂಡುವು. ಬಹುಶಃ ೧೭ನೇ ತಾರೀಖಿಗೆ ಯಾವ ಘಟನೆ ನಡೆಯಿತು ಅದರ ಬಗ್ಗೆ ಮಹಮ್ಮದ್, ಆತನ ಹೆಂಡತಿ ಮತ್ತು ಪ್ರತ್ಯಕ್ಷವಾಗಿ ನೋಡಿದ ಐದು ಜನರು ಮಗುವಿನ ಹತ್ಯೆ ಆದದ್ದು ಪ್ರಾಣಿಯಿಂದ ಅಲ್ಲ, ಮನುಷ್ಯರಿಂದ ಎಂದು ಹೇಳುತ್ತಿದ್ದಾರೆ. ಇಂತಹ ಮನುಷ್ಯರೇ ಪ್ರಾಣಿ ರೂಪದಲ್ಲಿ ಭಯಾನಕವಾಗಿ ಈ ರೀತಿ ಮಾಡುವಂತಹ ಕೃತ್ಯ ಬಯಲಿಗೆ ಬಂದದ್ದು ಮೊನ್ನೆ ಮಾತ್ರ. ಇಲ್ಲದಿದ್ದರೆ ನಾವು ಇಷ್ಟು ಪ್ರಸ್ತಾಪ ಮಾಡುತ್ತಿರಲಿಲ್ಲ. ಈ ವಿಚಾರ ಬೆಳಕಿಗೆ ಬಾರದೇ ಇದ್ದಿದ್ದರೆ ಈ ವಿಷಯಕ್ಕೆ ಇಷ್ಟು ಗಂಭೀರತೆ ಕೂಡ ಬರುತ್ತಿರಲಿಲ್ಲ.

ಮಾನ್ಯ ಅಧ್ಯಕ್ಷರೇ, ಈ ಶಿಶುಹತ್ಯೆಗಳು ಏನು ನಡೆದಿದೆ ಈ ಒಂದು ನಿಗೂಢವಾದ ಸಮಸ್ಯೆ ಸಂಶಯಾತ್ಮಕವಾದ ರೀತಿಯಲ್ಲಿ ೪ ತಿಂಗಳಿಂದಲೂ ಕೂಡ ನಡೆಯುತ್ತಾ ಇದೆ. ಎಲ್ಲ ಮಕ್ಕಳೂ ಸಹ ೫–೬ ವರ್ಷದ ಒಳಪಟ್ಟು ಇರುವವರೇ, ಅದರಲ್ಲೂ ಮೊದಲನೇ ಹೆಣ್ಣು ಮಕ್ಕಳನ್ನೇ ಹೊತ್ತುಕೊಂಡು ಹೋಗುತ್ತಾ ಇದೆ. ಅದರಲ್ಲೂ ಕೂಡ ಆ ತಂದೆ ತಾಯಿಗಳಿಗೆ ಇರತಕ್ಕಂಥಾ ಏಕಮಾತ್ರ ಪುತ್ರಿಯರು. ಆದುದರಿಂದ ಈ ಒಂದು ವಿಷಯು ಚರ್ಚೆಯ ವಸ್ತು ಆಗಿರದೆ ಇದರ ಸಂಶೋಧನೆ ಸರಿಯಾಗಿ ಆಗದೆ ಇದನ್ನು ಸರಿಯಾಗಿ ಪತ್ತೆ ಹುಡುಕುವ ಕೆಲಸ ಇನ್ನೂವರೆಗೂ ಆಗಲಿಲ್ಲ ಎನ್ನುವುದು ನಮಗೆಲ್ಲಾ ಸಂಶಯವಾಗಿದೆ. ಇದನ್ನು ಫೊರಾನ್‌ಸಿಕ್ ಲ್ಯಾಬರೇಟರೀಗೆ ಕಳುಹಿಸಬಹುದಾಗಿತ್ತು. ಅಲ್ಲಿಗೆ ೪–೫ ತಿಂಗಳ ನಂತರ ಪೋಲೀಸ್ ನಾಯಿಗಳನ್ನು ಕಳುಹಿಸಿದ್ದೀರಿ. ಅದೂ ಕೂಡ ಸರಿಯಾಗಿ ಎಲ್ಲರ ಗಮನಕ್ಕೆ ಬರಲಿಲ್ಲ. ಪ್ರಾರಂಭದಲ್ಲೇ, ಮೊದಲನೇ ಮತ್ತು ಎರಡನೆ ಘಟನೆ ನಡೆದಾಗಲೇ ಕಳುಹಿಸಬಹುದಾಗಿತ್ತು.

ಮತ್ತು ಸಂಬಂಧಪಟ್ಟ ಸಿ.ಒ.ಡಿ. ಅಥವಾ ಸಿ ಐ.ಡಿ, ಅವರನ್ನು ಕಳುಹಿಸಬಹುದಾಗಿತ್ತು. ನೀವು ಅಲ್ಲಿಗೆ ಪೋಲೀಸ್ ಪ್ಲೆಟೂನ್ಸ್ ಕಳುಹಿಸಿದ್ದೇವೆ ಅಂತ ಹೇಳುತ್ತೀರಿ, ಆದರೂ ಕೂಡ ಈ ನಿಗೂಢವಾದ ಹತ್ಯೆಯನ್ನು ಬಿಡಿಸಲಿಕ್ಕೆ ಆಗಲಿಲ್ಲ. ಈ ಒಂದು ಹತ್ಯೆ ಮಾನವನಿಂದ ಆಗಿರಬಹುದೇ, ಅಥವಾ ಪ್ರಾಣಿಯಿಂದ ಆಗಿರಬಹುದೇ ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಲಿಕ್ಕೆ ಆಗಲಿಲ್ಲ. ಸರಿಯಾಗಿ ಸಾಂದರ್ಭಿಕ ಸಾಕ್ಷಿಗಳು ಬರಲಿಲ್ಲ. ಇದುವರೆಗೂ ಕೂಡ ನೀವು ಆದರ ಬಗ್ಗೆ ಗುರುತಿಸದೇ ಇರುವುದನ್ನು ನೋಡಿದರೆ ಇನ್‌ವೆಸ್ಟಿಗೇಷನ್ ಪ್ರೊಸೆಸ್ ಸಂಶಯಾತ್ಮಕವಾಗಿ ನಡೆದಿಲ್ಲ ಎಂದು ತಿಳಿಯಬೇಕಾಗುತ್ತದೆ. ಅಲ್ಲದೆ ಮಾಡ್ರನೈಸ್ಡ್ ಪೋಲೀಸ್ ಬೇರೆ ಅಲ್ಲಿ ಮಾಡಿದ್ದೀರಿ. ಹಾಗಿದ್ದರೂ ಸಹ ಇದನ್ನು ಪತ್ತೆ ಮಾಡುವುದಕ್ಕೆ ಆಗಲಿಲ್ಲ. ಇದನ್ನು ಗಂಭೀರವಾದ ಪ್ರಶ್ನೇ ಎಂದು ಪರಿಗಣಿಸದೆ, ಇದರ ಬಗ್ಗೆ ಚರ್ಚೆಯಲ್ಲಿ ಕಾಲ ಕಳೆಯದೆ, ಈ ಒಂದು ಹತ್ಯೆ ಪ್ರಾಣಿಯಿಂದ ಆದದ್ದೇ ಅಥವಾ ಮಾನವನಿಂದ ಆದದ್ದೇ ಅನ್ನುವುದನ್ನು ಪತ್ತೆ ಹಚ್ಚಲಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ೪-೫ ತಿಂಗಳಾದರೂ ಕೂಡ ಇದನ್ನು ಕಂಡು ಹಿಡಿಯಲಿಕ್ಕೆ ಆಗದೇ ಹೋಗಿರುವುದರಿಂದ, ಈವೊತ್ತು ನಿಮಗೆ ಇರತಕ್ಕಂಥಾ ಪೋಲೀಸ್ ವ್ಯವಸ್ಥೆ ಏನು ಇದೆ ಆ ಮುಖಾಂತರ ಈ ಒಂದು ಕ್ರೈಮ್ ಅನ್ನು ಕಂಡುಹಿಡಿಯುವುದಕ್ಕೆ ಆಗದೇ ಹೋಗಿರುವುದರಿಂದ ಈ ಬಗ್ಗೆ ನೀವು ಒಂದು ಹತೋಟಿ ಇಟ್ಟುಕೊಳದೇ ಇರುವುದರಿಂದ ಈ ರೀತಿ ಆಗಿದೆ. ಆಲ್ಲದೆ ಇದರಲ್ಲಿ ನಿಮ್ಮ ಇಲಾಖೆಗಳು ವಿಫಲವಾಗಿವೆ ಎಂದು ಹೇಳಬೇಕಾಗಿದೆ. ಇದುವರೆಗೆ ೮ ಶಿಶುಗಳ ಹತ್ಯೆ ಆಗಿದೆ. ಆದರೂ ಮೊನ್ನೆತಾನೇ ಇನ್ನೊಂದು ಘಟನೆ ನಡೆದಿದೆ; ಈ ಘಟನೆ ಬಗ್ಗೆ ಪೋಲೀಸ್ ನಾಯಿಗಳನ್ನು ನೀವು ಕಳುಹಿಸಿದಾಗ ಅದು ಬಸ್ಸಿನೊಳಗೆ ಹೋಗಿ ಕೂತಿದೆ ಹತ್ಯೆ ಮಾಡಿರುವ ಪ್ರಾಣಿ ಬಸ್ಸಿನೊಳಗೆ ಹೋಗುವುದಕ್ಕೆ ಸಾಧ್ಯವೇ; ಆಮೇಲೆ ದೇವಸ್ಥಾನದ ಬಾಗಿಲಿಗೆ ಹೋಗಿದೆ, ಆ ಪ್ರಾಣಿ ದೇವಸ್ಥಾನ ಒಳಗೆ ಹೋಗಲು ಸಾಧ್ಯವೇ, ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ, ಅದನ್ನು ಫೊರಾನ್ಸಿಕ್ ಲ್ಯಾಬೋರೇಟರಿಗೆ ಕಳುಹಿಸಿದರೆ ಗುರುತಿಸಬಹುದಾಗಿತ್ತು. ಇದರ ಬಗ್ಗೆ ಯಾವ ರೀತಿಯಾದ ಒಂದು ಸ್ಪಷ್ಟವಾದ ನಿಲುವು ಇನ್ನೂ ಕಂಡು ಹಿಡಿಯದೇ ಇದ್ದ ಕಾರಣ ನಿಮ್ಮ ಪೋಲೀಸ್ ಇಲಾಖೆ ಗೃಹ ಇಲಾಖೆ ಕೆಲಸಗಳು ಕುಂಠಿತವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಚಾರ ಏನೆಂದರೆ, ಪ್ರತಿಯೊಂದು ಗಾಯದಲ್ಲೂ ಬಹಳ ಮೊನಚಾದ ಆಯುಧಗಳಿಂದ ಚುಚ್ಚಿ ಗಾಯವಾಗಿದೆ ಎಂದು ಹೇಳಿದ್ದೀರಿ. ಪ್ರತಿಯೊಂದು ಘಟನೆಯಲ್ಲೂ ಕೂಡ ಸರಿಯಾಗಿ ವಿಶ್ಲೇಷಣೆ ಮಾಡಿ ನೋಡಿದರೆ ಅದರ ಹೆಜ್ಜೆಯನ್ನು ಆಳವಾಗಿ ಅಭ್ಯಾಸ ಮಾಡಿ ನೋಡಿದರೆ ಅದು ಖಂಡಿತವಾಗಿಯೂ ಪ್ರಾಣಿಯಿಂದ ಆಗುವುದಕ್ಕೆ ಸಾಧ್ಯವೇ ಇಲ್ಲ. ಮಾನವನಿಂದ ಆಗುವುದಕ್ಕೆ ಸಾಧ್ಯ ಇದೆ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ, ಅಲ್ಲಿ ೩ ಇಂಚು ಇರುವ ಪ್ರಾಣಿಯನ್ನು ಹೊಂಡ ಮಾಡಿ ಏನು ಹೂತಿದ್ದರೋ ಅದನ್ನು ಸರಿಯಾಗಿ ಗುರುತಿಸಿಲ್ಲ ಎಂದು ಹೇಳಬೇಕಾಗಿದೆ. ಈ ಮಕ್ಕಳನ್ನು ಕತ್ತೆ ಕಿರುಬವೇ ತಿಂದಿರಬೇಕು ಅನ್ನುವ ವರದಿ ಏನು ಕೊಟ್ಟಿದ್ದೀರಿ ಅದು ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ. ಏತಕ್ಕೆಂದರೆ, ಯಾವ ದೃಷ್ಟಿಯಲ್ಲಿ ನೋಡಿದರೂ ಕೂಡ ಇದರಲ್ಲಿ ಸಾಕಷ್ಟು ಸಾಕ್ಷಿಯನ್ನು ನಾವು ಕಂಡಿಲ್ಲ. ನಾನು ಮೊದಲೇ ಹೇಳಿದ ಹಾಗೆ, $1\frac{1}{2}$ ಅಡಿ ಹೊಂಡದಲ್ಲಿ ಅದನ್ನು ಹೂತು ಹಾಕುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಈ ಕೆಲಸವನ್ನು ಮನುಷ್ಯನೇ ಮಾಡಿರಬೇಕೇ ವಿನಾ ಪ್ರಾಣಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಇನ್ನೊಂದು ವಿಷಯ ಏನೆಂದರೆ, ನಿನ್ನೆ ದಿವಸ ಪಾವಗಡದಿಂದ ಅನೇಕ ರೈತರು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು ಇದರ ಬಗ್ಗೆ ಮಾತನಾಡಿ ಇದನ್ನು ತನಿಖೆ ಮಾಡಿಸಬೇಕು ಎಂದು ಇಲ್ಲಿಗೆ ಬಂದಾಗ ಅವರಿಗೆ ಎರಡುಸಾರಿ ಲಾಠಿ ಚಾರ್ಜು ಆಗಿದೆ. ನೀವು ಈವೊತ್ತು ಹೇಳಿದಿರಿ ಲಾಠಿಛಾರ್ಜು ಆಗಿಲ್ಲಾ ಎಂದು. ಆದುದರಿಂದ ಈ ವಿಷಯವೂ ಕೂಡ ಸತ್ಯಕ್ಕೆ ದೂರವಾದ ವಿಚಾರ ಎಂದು ಹೇಳುತ್ತೇನೆ. ಅವರಿಗೆ ಎರಡು ಸಾರಿ ಲಾಠಿಛಾರ್ಜು ಆಗಿದೆ. ಇದು ಪತ್ರಿಕೆಯಲ್ಲೂ ಬಂದಿದೆ. ಇಷ್ಟು ಮಾತ್ರವಲ್ಲದೆ ೨೨ನೇ ತಾರೀಖು ಪಾವಗಡ ತಾಲ್ಲೂಕಿನ ರೈತ ಸಂಘದವರು ಒಂದು ಮನವಿಯನ್ನು ಕೊಟ್ಟರು ಏನಂತ ಅಂದರೆ ನಾವು ಶಿಶು ಸಂರಕ್ಷಣಾ ಮೆರವಣಿಗೆಯನ್ನು ಮಾಡಬೇಕು ಎಂದು. ಈ ವಿಷಯವನ್ನು ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿಗಳಿಗೆ ಬಿಟ್ಟು ಬಿಡಬೇಕಾಗಿತ್ತು, ಇಲ್ಲವೇ ಅಲ್ಲಿಯ ಸ್ಥಳೀಯ ಅರಣ್ಯ ಅಧಿಕಾರಿಗಳಿಗೆ ಬಿಟ್ಟುಬಿಡಬೇಕಾಗಿತ್ತು, ಹಾಗೆ ಮಾಡಲಿಲ್ಲ. ಒಂದೊಂದು ಸಾರಿ ಏನಾಗುತ್ತದೆ ಎಂದರೆ ನಾವು ಕೆಲವು ವಿಷಯಗಳನ್ನು ಅಲ್ಲಿರುವ ಸ್ಥಳೀಯ ಅಧಿಕಾರಿಗಳಿಗೆ ಬಿಡದೇ

ಹೋದರೆ ಟಾಪ್ ಪೀಪಲ್ಸ್ ಅಂದರೆ ಅರಣ್ಯ ಅಧಿಕಾರಗಳಿಗಾಗಲಿ ಅಥವಾ ಪೋಲಿಸ್ ಅಧಿಕಾರಿಗಳಿಗೆ ಆಗಲಿ ಬಿಟ್ಟರೆ ಇಂಥಾ ಒಂದು ನಿಗೂಢವಾದ ಸಮಸ್ಯೆಯನ್ನು ಬಿಡಿಸಲಿಕ್ಕೆ ಸಾಧ್ಯವಾಗದೆ ಅದು ಮತ್ತೊಂದು ರೀತಿಯಲ್ಲಿ ಕಗ್ಗಂಟಾಗುವ ಪರಿಸ್ಥಿತಿ ಬರುತ್ತದೆ. ಆ ರೀತಿಯಾಗಿ ಇದು ಕಗ್ಗಂಟಾಗಿದೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಬಂದಿರತಕ್ಕಂಥಾ ಸಂಶಯವನ್ನು ಹೋಗಲಾಡಿಸಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ, ಸರ್ಕಾರದಲ್ಲಿ ಎಲ್ಲಾ ತರಹದ ಎಕ್ವಿಪ್‌ಮೆಂಟ್ಸ್, ಸಾಧನಗಳು ಇರುವುದರಿಂದ ಇಂತಹ ನಿಗೂಢವಾದ ಸಮಸ್ಯೆಯನ್ನು ಶಿಶುಹತ್ಯೆಯ ಕೃತ್ಯಗಳನ್ನು ಬಿಡಿಸಬೇಕು. ಈ ಒಂದು ಘಟನೆ ನಡೆದು ೪ ತಿಂಗಳಾದರೂ ಕೂಡ ಸರ್ಕಾರದವರು ಬಿಡಿಸಲಿಕ್ಕೆ ಆಗಲಿಲ್ಲ ಎಂದರೆ ಇದು ಸರ್ಕಾರದ ಒಂದು ನಿಷ್ಕ್ರಿಯತೆಯನ್ನು ತೋರಿಸುತ್ತದೆ. ಇಲ್ಲದೇ ಹೋದರೆ ಇದರಲ್ಲಿ ಸರ್ಕಾರ ತನ್ನ ಪ್ರತಿಷ್ಠೆಯನ್ನು ತೋರಿಸುತ್ತದೆ ಎನ್ನುವ ಅನುಮಾನ ಬರುತ್ತದೆ. ಆದುದರಿಂದ ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮುಕ್ತ ಮನಸ್ಸು ಮಾಡಿ ಇದರ ಬಗ್ಗೆ ಸರಿಯಾದ ತನಿಖೆ ನಡೆಯಬೇಕು. ಡಾಕ್ಟರ್ಸ್ ತಮ್ಮ ರಿಪೋರ್ಟಿನಲ್ಲಿ ೮ ಮಕ್ಕಳ ಹತ್ಯೆಯಲ್ಲೂ ಕೂಡ ಅದರಲ್ಲಿ ಯಾವ ಯಾವ ಗಾಯಗಳಾಗಿವೆ ಎನ್ನುವುದನ್ನು ತೋರಿಸಿದ್ದಾರೆ.

ಶ್ರೀ ಪಿ. ರಾಂದೇವ್.—ಇದು ಸಾಧು ಲಕ್ಷ್ಮಣಗಿರಿ ತರಹ ಕೇಸ್ ಆಗಬಾರದು ಎಂದು ನಾನು ಹೇಳುತ್ತೇನೆ.

ಇಲ್ಲಿ ಎಂಟು ಶಿಶುಗಳ ಹತ್ಯೆ ಆಗಿದೆ. ಸಾಧು ಲಕ್ಷ್ಮಣಗಿರಿ ಪ್ರಕರಣದಲ್ಲಿ ವರದಿ ಬಂದು ಯಾರಿಗೆ ಶಿಕ್ಷೆಯಾಗಿದೆ ಎನ್ನುವುದು ತಮಗೆ ಗೊತ್ತಿದೆ. ಇದರಲ್ಲಿ ನಮಗೂ ನಿಮಗೂ ತೊಂದರೆಯಾಗುವುದಿಲ್ಲ. ಇವರು ಎಲ್ಲದಕ್ಕೂ ರಾಜಕೀಯ ಬಳಸುತ್ತಾರೆ, ಎಲ್ಲದಕ್ಕೂ ದುರುದ್ದೇಶವನ್ನು ಹುಡುಕುತ್ತಾರೆ, ಇವೆಲ್ಲಾ ಹುಡುಕಿಕೊಂಡು ಈ ಒಂದು ವಾತಾವರಣವನ್ನು ಕದಡಿಸಿಬಿಡುತ್ತಾರೆ.

ಶ್ರೀ ಪಿ. ರಾಮ್‌ದೇವ್.— ತಾವು ಮಾತನಾಡುವಾಗ ಈ ವಿಷಯವನ್ನು ನಾವು ಪ್ರತಿಷ್ಠೆಯಿಂದ ನೋಡುತ್ತಿದ್ದೇವೆಂದು ಹೇಳಿದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ,— ಇಲ್ಲಿ ಪ್ರತಿಷ್ಠೆ ಬೆಳೆದಿದೆ, ನಾನೂ ಕೂಡ ಪಾವಗಡಕ್ಕೆ ಹೋಗುತ್ತಿದ್ದೇನೆ. ಸಾರ್ವಜನಿಕರನ್ನು ನಾವೂ ಕೂಡ ಭೇಟಿಯಾದರೆ ಕೆಲವು ವಿಚಾರಗಳು ಹೊರ ಬೀಳುವ ಪ್ರಸಂಗಗಳು ಬರುತ್ತವೆ. ಇದನ್ನು ತಾವು ಪ್ರತಿಷ್ಠೆಗೆ ಎಡೆ ಕೊಟ್ಟಂಥ ಧಾಟಿಯಿಂದ ನೋಡುತ್ತಿದ್ದೀರಿ ಎಂದು ನಾನು ಹೇಳಬೇಕಾಗಿದೆ ಈಗ ನಡೆದಿರತಕ್ಕ ಪರಿಸ್ಥಿತಿಯನ್ನು ನೋಡಿದರೆ ನಾಳೆಯ ದಿವಸ ಏನಾದರೂ ನಡೆಯಬಹುದು ಎಂದು ಜನರಲ್ಲಿ ಭಯ ಮೂಡಿದೆ. ಇದು ನಾಲ್ಕು ತಿಂಗಳಿಂದ ಸತತವಾಗಿ ನಡೆದು, ಹತ್ಯೆ ಮಾಡಿದವರು ತಪ್ಪಿಸಿಕೊಂಡು ಹೋಗುವುದಿದ್ದರೆ ಅದನ್ನು ಹಿಡಿಯತಕ್ಕಂಥ ಪ್ರಯತ್ನವನ್ನು ನಾವು ಮಾಡದಿದ್ದರೆ ಜನರ ಗತಿಯೇನು ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಬೇಕು. ಮತ್ತು ಸತ್ಯವನ್ನು ತಿಳಿಯಬೇಕು. ನಿಜವಾದ ಸತ್ಯವನ್ನು ನಾವು ಹುಡುಕತಕ್ಕ ದೃಷ್ಟಿಯಲ್ಲಿ ವಿಚಾರಗಳು ನಮ್ಮ ಮುಂದೆ ಬಾರದಿದ್ದರೆ ಸತ್ಯದ ಸಂಶೋಧನೆಯಾಗುವುದಿಲ್ಲ. ಇದಕ್ಕೆ ಈ ಶಿಶು ಹತ್ಯಾಕಾಂಡ ಒಂದು ಸಂಗತಿಯಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇಲ್ಲಿ ಸರ್ಕಂಸ್ಟಾನ್ಷಿಯಲ್ ಎವಿಡೆನ್ಸ್ ಇದ್ದರೂ ಕೂಡ ಇದನ್ನು ತನಿಖೆ ಮಾಡಲಿಕ್ಕೆ ಇರುವ ತೊಂದರೆ ಏನು? ಇಲ್ಲಿ ಯಾವ ರೀತಿಯ ತಪ್ಪು ಆಗಿದೆ. ತಪ್ಪಿತಸ್ಥರು ಯಾರು ಎಂದು ಕಂಡುಹಿಡಿದು ಗುರುತಿಸಿ, ಅದು ಅರಣ್ಯ ಇಲಾಖೆಯವರದೇ ಇರಲೀ, ಪೋಲೀಸ್ ಇಲಾಖೆಯವರದೇ ಇರಲೀ, ಸರಿಯಾದ ರೀತಿಯಲ್ಲಿ ಸಂಶೋಧನೆ ಮಾಡಲಿಕ್ಕೆ ಅವರು ಎಲ್ಲಿ ಎಡವಿದ್ದಾರೆ ಎಂದು ನೋಡಬೇಕು. ನಾಲ್ಕು ತಿಂಗಳ ಕಾಲದಿಂದ ಜನರಿಗೆ ಇದರ ಬಗ್ಗೆ ಸರಿಯಾದಂಥ ತಿಳುವಳಿಕೆ ಕೊಡದೆ ಜನರನ್ನು ಸಂರಕ್ಷಣೆ ಮಾಡುವಲ್ಲಿ ಅಸಮರ್ಥರಾಗಿರತಕ್ಕವರನ್ನು ಗುರುತಿಸಬೇಕು. ಸರ್ಕಾರ ನಾಲ್ಕು ತಿಂಗಳುಗಳ ಕಾಲ ಇದನ್ನು ಪರಿಣಾಮಕಾರಿ ಸಮಸ್ಯೆಯನ್ನಾಗಿ ನೋಡದೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ೮ ಹಸುಳೆಗಳ ಮರಣ. ಇದಕ್ಕೆ ಕಾರಣಭೂತರಾದವರು ಯಾರು ಎಂದು ನೋಡಿ ಅದಕ್ಕೆ ಪೂರಕ ದಾಖಲೆಗಳನ್ನು ನಮಗೆ ತಿಳಿಸಬೇಕು, ಅದು ಮೆಡಿಕಲ್ ರಿಪೋರ್ಟ್ ಇರಲಿ, ಹಿಂದೆ ತೆಗೆದುಕೊಂಡ ಫೋರ್‌ನ್ಸಿಕ್ ಲ್ಯಾಬೊರಟರಿಯ ರಿಪೋರ್ಟ್ ಇರಲೀ, ಎಲ್ಲಾ ವರದಿಗಳನ್ನು ಈ ಸದನಕ್ಕೆ ಕೊಟ್ಟಾಗ ಮಾತ್ರ ಪೋಲೀಸ್ ಇಲಾಖೆಯಾಗಲೀ, ಅರಣ್ಯ ಇಲಾಖೆಯಾಗಲೀ ತನ್ನ

ಕಾರ್ಯಕ್ರಮವನ್ನು ಪ್ರಾಮಾಣಿಕತನದಿಂದ ಮಾಡಿದೆ ಎಂದು ನಮಗೆ ದರ್ಶನವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರಿಯಾದ ವಿಚಾರಣೆಯನ್ನು ತಾವು ನಡೆಸಬೇಕು. ಈ ವಿಷಯದಲ್ಲಿ ತಾವು ಜನರನ್ನು ಹೆದರಿಸಬೇಡಿ. ಜನರು ಸರಿಯಾದ ಮಾಹಿತಿಯನ್ನು ಕೊಡುವುದಕ್ಕೆ ಮುಂದೆ ಬಂದಾಗ ಅವರನ್ನು ಹೆದರಿಸತಕ್ಕ ಕೆಲಸ ಮಾಡದೆ ಅವರ ಅಭಿಪ್ರಾಯವನ್ನು, ಅವರ ಸಾಕ್ಷಿಗಳನ್ನು ಒದಗಿಸಲಿಕ್ಕೆ ಮುಕ್ತ ಅವಕಾಶವನ್ನು ತಾವು ಒದಗಿಸಿಕೊಡಬೇಕು ಎಂದು ನಾನು ಈ ಸದನದ ಮುಖಾಂತರ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಬಹಳ ವಿಷಾದ ಮತ್ತು ಕನಿಕರ ಎನಿಸುತ್ತದೆ. ಏಕೆಂದರೆ, ಇದನ್ನು ನಮ್ಮ ವಿರೋಧಪಕ್ಷದ ನಾಯಕರೂ ಕೂಡ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಇದು ನಿಲುವಳಿ ಸೂಚನೆಯ ರೂಪದಲ್ಲಿ ತರುವುದಕ್ಕೆ ಅಷ್ಟು ಪ್ರಾಮುಖ್ಯವಾದುದಲ್ಲ ಎಂದು ಹೇಳಿದರು ಇದು ನಮಗೆ ನಿಜವಾಗಿಯೂ ಬಹಳ ವಿಷಾದ ಎಂದೆನಿಸುತ್ತದೆ, ಇಲ್ಲಿ ಶಿಶುಹತ್ಯಾ ಕಾಂಡದಲ್ಲಿ ೮ ಮಕ್ಕಳನ್ನು ಕಳೆದುಕೊಂಡಿರತಕ್ಕ ತಂದೆ-ತಾಯಿಗಳು ಏನು ಇದ್ದಾರೋ ಅವರಿಗೆ ಅವರಿಗೆ ಆಗಿರತಕ್ಕ ದುಃಖವನ್ನು ನಾವು ಇಲ್ಲಿ ಹೇಳತೀರದಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.— ಇದನ್ನು ನಿಲುವಳಿ ಸೂಚನೆಯ ರೂಪದಲ್ಲಿ ತರುವುದಕ್ಕೆ ಅಷ್ಟು ಆಧಾರ ಇಲ್ಲ ಎಂದು ನಾನು ಹೇಳಿದೆ, ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ವಿರೋಧ ಮಾಡುವುದಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ಈ ವಿಷಯ ಅಷ್ಟು ಗಂಭೀರವಾಗಿಲ್ಲ ಎಂದು ಹೇಳಿದಿರಿ, ಆದರೆ ನಾವಿನ್ನೂ ಇಂಥ ವಿಷಯಗಳ ಬಗ್ಗೆ ಗಂಭೀರತೆಯನ್ನು ಕಳೆದುಕೊಂಡಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದು ವಿವರವಾಗಿ ಹೇಳಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದನ್ನು ನಾವು ಸಭೆಯಲ್ಲಿ ತಂದಿರತಕ್ಕ ಉದ್ದೇಶವಾದರೂ ಇಷ್ಟೆ. ನಾವು ಇಲ್ಲಿ ಈ ವಿಷಯವನ್ನು ಬಹಳವಾಗಿ ಮಾತನಾಡಿ ೮ ಜನ ಮಕ್ಕಳ ಜೀವನವನ್ನು ತಂದು ಕೊಡತಕ್ಕ ಕೆಲಸವನ್ನು ಮಾಡುವುದಿಲ್ಲ. ಮಾಡತಕ್ಕ ಕೆಲಸ ಎಂದರೆ ಈ ಜೀವಗಳು ಹೋಗುವುದಕ್ಕೆ ಯಾರು ಕಾರಣರಾಗಿದ್ದಾರೆ ಆ ನಿಜವಾದ ತಪ್ಪಿತಸ್ಥರನ್ನು ಕಾಯಿದೆ ಪ್ರಕಾರ ಶಿಕ್ಷಿಸುವಂತೆ ಮತ್ತು ಇಂಥ ಅಹಿತಕರವಾದ ಘಟನೆಗಳು ಇನ್ನು ಮುಂದೆ ಆಗಬಾರದು ಎನ್ನುವುದು, ಈ ವಿಷಯ ೨೮-೪-೧೯೮೩ರಿಂದ ನಡೆಯುತ್ತಾ ಬಂದಿದ್ದು ಈ ಪ್ರಕರಣದ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ವಿವರವಾಗಿ ಮಾತನಾಡಿದ್ದಾರೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ಇವರಲ್ಲಿ ನಾನು ಕೇಳತಕ್ಕದ್ದು ಇಷ್ಟೆ, ಇಷ್ಟು ಮಕ್ಕಳು. ಜೀವ ಕಳೆದುಕೊಂಡರೂ ಕೂಡ ಇದು ಪ್ರಾಣಿಗಳಿಂದಲೇ ಆಗಿರಲಿ ಮನುಷ್ಯರಿಂದಲೇ ಆಗಿರಲಿ ಅಥವಾ ಈ ಎರಡರ ಮಧ್ಯದಲ್ಲಿ ಮತ್ತೊಂದು ಯಾವುದೋ ಒಂದು ಜೀವದಿಂದ ಆಗಿದ್ದರೂ ಕೂಡ, ಇದು ಯಾವ ರೀತಿಯಲ್ಲಿ ಆಗಿದೆ ಎನ್ನುವುದನ್ನು ಗುರುತು ಹಚ್ಚಿಸಲಿಕ್ಕೆ ಯಾವ ಇಲಾಖೆಗೂ ಇನ್ನೂ ಆಗದೆ ಇರುವುದು ಬಹಳ ಮುಖ್ಯವಾದ ಅಂಶವಾಗಿದೆ. ಇವರ ವಿದ್ಯೆ. ಬುದ್ಧಿ ಮತ್ತು ಜಾಣ್ಮೆಯನ್ನು ನಾವೆಲ್ಲರೂ ಇವತ್ತು ಪ್ರಶ್ನೆ ಮಾಡಬೇಕಾಗಿದೆ. ಪೋಲೀಸ್ ಇಲಾಖೆಯವರು ದೊಡ್ಡ ದೊಡ್ಡ ಪ್ರಕರಣಗಳನ್ನು ಪತ್ತೆ ಹಚ್ಚುವುದನ್ನು ನಾವು ನೋಡಿದ್ದೇವೆ, ದರೋಡೆಯಾಗಿರಲಿ, ಮರ್ಡರ್ ಆಗಿರಲಿ ಇವುಗಳನ್ನು ಕೆಲವೇ ದಿವಸಗಳಲ್ಲಿ ಪತ್ತೆ ಹಚ್ಚತಕ್ಕವರು ಈ ಘಟನೆ ನಡೆದು ಸುಮಾರು ನಾಲ್ಕು ತಿಂಗಳಾದರೂ ಇನ್ನೂ ಪತ್ತೆ ಹಚ್ಚಲಿಕ್ಕಾಗಲಿಲ್ಲ ಎಂದರೆ ಅಧಿಕಾರಿಗಳು ಎಷ್ಟೊಂದು ಅಸಮರ್ಥರಾಗಿದ್ದಾರೆಂದು ನಾವು ಯೋಚನೆ ಮಾಡಬೇಕಾಗುತ್ತದೆ. ಈ ಮಕ್ಕಳ ಜೀವಗಳು ಹೋದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಇವೆ. ಅರಣ್ಯ ಇಲಾಖೆಯವರು ಇದು ಪ್ರಾಣಿಯಿಂದ ಆಗಿರಬಹುದು ಎಂದು ಹೇಳುತ್ತಾರೆ. ಪೋಲೀಸ್ ಇಲಾಖೆಯವರು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದು ಮನುಷ್ಯನಿಂದ ಆಗಿರಬಹುದು ಎಂದು ಹೇಳುತ್ತಾರೆ. ಇದು ಯಾರಿಂದಲೇ ಆಗಿರಲಿ, ಈ ಮಧ್ಯೆ ಮಕ್ಕಳನ್ನು ಕಳೆದುಕೊಂಡವರು ಮಕ್ಕಳ ಜೀವನವನ್ನು ಕೊಡಿ ಎಂದು ಪೊಲೀಸ್ ಸ್ಟೇಷನ್‌ಗೆ ಕೇಳುವುದಕ್ಕೆ ಹೋಗಲಿಲ್ಲ ಈ ರೀತಿಯ ಘಟನೆಗಳು ಆಗುತ್ತಲಿವೆ. ಇದನ್ನು ತಪ್ಪಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿಯನ್ನು ಸಲ್ಲಿಸುವುದಕ್ಕೆ ಹೋದಾಗ ಅವರನ್ನು ಅಧಿಕಾರಿಗಳು ಹೊಡೆದು ಕಳುಹಿಸತಕ್ಕದ್ದು ಅಹಂಕಾರದ ವರ್ತನೆ ಎಂದು ನಾನಾದರೂ ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ರೀತಿಯಾದರೆ ಜೀವ ರಕ್ಷಣೆ ಮಾಡುವುದು ಒಂದು ಕಡೆ ಇರಲಿ ನ್ಯಾಯಯುತವಾದ ಬೇಡಿಕೆಗಳನ್ನು ಸಲ್ಲಿಸತಕ್ಕ ಸಂದರ್ಭದಲ್ಲಿಯೂ ಇಂಥ ಅಹಿತಕರ ಘಟನೆಗಳು ನಡೆದರೆ ಸರ್ಕಾರದವರು ಇದನ್ನು ಯೋಗ್ಯ ರೀತಿಯಲ್ಲಿ ವಿಚಾರ ಮಾಡತಕ್ಕದ್ದು ಸೂಕ್ತ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಸರ್ಕಾರದಿಂದ ಇಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಸಭೆಯಲ್ಲಿ ಸೂಚಿಸಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಾದರೂ ಗೋಲಿಬಾರ್ ಆದರೆ ಯಾರೋ ಮಂತ್ರಿಗಳು ಹೋಗಿ ನೋಡಿಕೊಂಡು ಬರುತ್ತಾರೆ. ಇನ್ಸ್‌ಪೆಕ್ಷನ್ ಮಾಡಿಕೊಂಡು ಬರುತ್ತಾರೆ, ಆದರೆ ಗೃಹಖಾತೆಯ ರಾಜ್ಯ ಮಂತ್ರಿಗಳಾದ ಶ್ರೀಮಾನ್ ಜಿಗಜಿನ್ನಿಯವರು ಒಂದು ಸಲವೂ ಕೂಡ ಪಾವಗಡಕ್ಕೆ ಹೋಗಿಬರತಕ್ಕ ಸೌಜನ್ಯ ಕೂಡ ತೋರಿಸಲಿಲ್ಲ.

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ.—ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆರೋಪ ಮಾಡುವಾಗ ವಿಚಾರ ತಿಳಿದುಕೊಂಡು ಮಾಡಿ.

ಶ್ರೀ ಪಿ. ತಿಪ್ಪಯ್ಯ.— ಮಾತನಾಡಬೇಕು ಎಂಬ ಚಟ ಇದ್ದರೆ ಮಾತನಾಡಿ, ದಯವಿಟ್ಟು ಜವಾಬ್ದಾರಿಯಿಂದ ಮಾತನಾಡಬೇಕು, ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಮಂತ್ರಿಗಳು ಹೋದರೂ ಕೂಡ ನಿಜಸ್ಥಿತಿಯನ್ನು ತಿಳಿದುಕೊಂಡು ಬರುವುದಕ್ಕೆ ಆಗಲಿಲ್ಲ. ಮಂತ್ರಿಗಳಾದವರು ಈ ರೀತಿ ಘಟನೆ ನಡೆಯುತ್ತಿದೆ ಎಂದು ಹೇಳಿದ್ದರೆ ನಾನು ಸಂತೋಷಪಡುತ್ತಿದ್ದೆ. ಇವರು ಹೋದರೂ ಕೂಡ ವ್ಯರ್ಥ ಎಂದು ತಿಳಿದು ಕೊಂಡಿದ್ದೇನಷ್ಟೆ. ಈ ವಿಷಯದ ಬಗ್ಗೆ ಸ್ವಲ್ಪ ವಿವರಗಳನ್ನು ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮುಂದಿನ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಂತ್ರಿಗಳು ಹೋಗಿ ಮಂತ್ರ ಹಾಕುವುದಕ್ಕಾಗುತ್ತದೆಯೇ ? ಮಂತ್ರ ಹಾಕಿ ಉಪದೇಶ ಮಾಡುವ ಹಾಗಿದ್ದರೆ ಮಂತ್ರಿಗಳು ಹೋದರೂ ಪ್ರಯೋಜನವಾಗಬಹುದು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಗಳೇ ಬಂದಮೇಲೆ ಗಲಾಟೆಯಾಗುತ್ತಿದೆ.

ಅಧ್ಯಕ್ಷರು.— ನಿಮ್ಮ ಕಾಲದಲ್ಲೂ ಆಗುತ್ತಿತ್ತು ಎಂದು ಹೇಳುತ್ತಾರೆ ಅವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಗಳಿಗೆ ಗೊತ್ತಾಗಿದೆ.

ಶ್ರೀ ಎನ್. ಜಿ. ನಾಯಕ್.—ಅವರಿಗೆ ಮಕ್ಕಳಿಲ್ಲ ಎಂದು ಕಾಣುತ್ತದೆ, ಮಕ್ಕಳನ್ನು ಕಳೆದು ಕಳೆದುಕೊಂಡ ತಂದೆ-ತಾಯಿಗಳಿಗೆ ಆ ನೋವು ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಅವರು ಸಾರಾಗವಾಗಿ ಎಲ್ಲರಿಗೂ ಮಕ್ಕಳಿಲ್ಲ ಎಂದು ಹೇಳುವುದಕ್ಕೆ ಹೋಗಿದ್ದಾರೆ. ಇವರೊಬ್ಬರಿಗೇನೇ ಮಕ್ಕಳು ಇರುವುದು.

ಶ್ರೀ ಎಸ್. ಬಂಗಾರಪ್ಪ (ಸೊರಬಾ).—ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ವಿರೋಧಪಕ್ಷದ ನಾಯಕರು ಬಹಳ ವಿವರಗಳನ್ನೂ ಕೂಡ ಕೊಟ್ಟಿದ್ದಾರೆ. ಆದುದರಿಂದ ಅಂತಹ ವಿವರಗಳು ನನ್ನ ಹತ್ತಿರ ಇರುವುದರಿಂದ ನಾನು ಅವುಗಳನ್ನು ಪುನಃ ಉಚ್ಚಾರ ಮಾಡುವ ಅವಶ್ಯಕತೆಯಿಲ್ಲ ಎಂದು ನಾನು ಭಾವಿಸಿದ್ದೇನೆ. ಈ ಘಟನೆಯಲ್ಲಿ ೮ ಜನ ಮಕ್ಕಳು ಜೀವ ಕಳೆದುಕೊಂಡಿದ್ದಾರೆ. ಅದರಲ್ಲಿ ೬ ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಅನೇಕ ದಿನಗಳಿಂದ ನಾವು ಇದರ ಬಗ್ಗೆ ಪತ್ರಿಕೆಗಳಲ್ಲಿ ನೋಡುತ್ತಾ ಇದ್ದೆವು. ಒಂದು ನಿರ್ದಿಷ್ಟವಾಗಿರತಕ್ಕಂಥ ವಯಸ್ಸಿನ ಒಳಗೆ ಇರತಕ್ಕವರು ಅಂದರೆ ಚಿಕ್ಕ ಚಿಕ್ಕ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಸಾವಿಗೆ ಒಳಗಾಗುತ್ತಿದ್ದಾರೆ ಎನ್ನುವ ಅಂಶವನ್ನು ಪತ್ರಿಕೆಯಲ್ಲಿ ನೋಡುತ್ತಿದ್ದೆವು. ಪತ್ರಿಕೆಯನ್ನು ಓದತಕ್ಕ ನಮಗೂ ಕೂಡ ಕೆಲವೊಮ್ಮೆ ಯಾವುದೋ ಪ್ರಾಣಿ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿದೆ ಎಂದು

ಆಶ್ಚರ್ಯವಾಯಿತು. ಪ್ರಾಣಿಗಳು ಬಂದು ಮಕ್ಕಳನ್ನು ಎತ್ತಿಕೊಂಡು ಹೋಗುವುದು ಬಹಳ ನಿಗೂಢವಾಗಿರತಕ್ಕ ವಿಚಾರ. ತಮ್ಮ ಪ್ರದೇಶವಾದ ಕಾರವಾರ, ಅದು ಅರಣ್ಯ ಪ್ರದೇಶ ಮತ್ತು ಮಲೆನಾಡು ಪ್ರದೇಶದಲ್ಲಿ ಸಾಮಾನ್ಯವಾಗಿ ಜಗಲಿ ಮೇಲೆ ಮಲಗಿಕೊಂಡಿರುತ್ತಾರೆ. ಜಗಲಿ ಮೇಲೆ ಮಲಗಿಕೊಂಡರೂ ಕೂಡ ಅಂತಹ ಅರಣ್ಯ ಪ್ರದೇಶದಲ್ಲಿ ಮಕ್ಕಳನ್ನು ಎತ್ತಿಕೊಂಡು ಹೋಗಿದ್ದನ್ನು ಕಂಡಿರಲಿಲ್ಲ; ಹೋದರೂ ಕೂಡ ಅಂತಹ ಪ್ರಾಣಿಗಳು ಇರುವುದಕ್ಕೆ ಸಾಧ್ಯವಿರುತ್ತಿತ್ತು. ನಮಗೆಲ್ಲಾ ಗೊತ್ತಿರುವ ಹಾಗೆ, ಪಾವಗಡ ತಾಲ್ಲೂಕು ಇಂತಹ ದಟ್ಟವಾದ ಕಾಡನ್ನು ಹೊಂದಿರತಕ್ಕ ಪ್ರದೇಶವಲ್ಲ. ಅಲ್ಲಿ ಪ್ರಾಣಿಗಳು ಬರುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಗುಡ್ಡಗಾಡಿನಲ್ಲಿ ತೋಳ, ಹುಲಿ ಮುಂತಾದುವು ಇರಬಹುದು. ಒಟ್ಟು ವಿಚಾರ ಪತ್ರಿಕೆಯಲ್ಲಿ ಬಂದಿದೆ. ಮಕ್ಕಳನ್ನು ಎತ್ತಿಕೊಂಡು ಹೋಗುವುದು, ಮಕ್ಕಳು ಕಾಣೆಯಾಗುವುದು, ಜೀವ ಕಳೆದುಕೊಳ್ಳುವುದು ಅಥವಾ ದೇಹ, ಕೈಕಾಲು ಕಳೆದುಕೊಂಡು ಛಿದ್ರ ಛಿದ್ರ ರೂಪದಲ್ಲಿ ಸಿಗತಕ್ಕ ವಿಚಾರವನ್ನು ನಾವೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೇವೆ. ಇದರ ಬಗ್ಗೆ ಆ ಇಡೀ ತಾಲ್ಲೂಕಿನ ಜನತೆ ಕಳವಳಗೊಂಡಿದ್ದಾರೆ. ಮಕ್ಕಳನ್ನು ಕಳೆದುಕೊಂಡಿರತಕ್ಕವರ ಬಗ್ಗೆ ಸಹಾನುಭೂತಿ ಸದನಕ್ಕೆ, ರಾಜ್ಯದ ಜನತೆಗೆ ಇದೆ. ಇವತ್ತು ಮಕ್ಕಳು ಜೀವ ಕಳೆದುಕೊಳ್ಳತಕ್ಕ ವಿಷಯ ಏನಿದೆ ಅದು ಯಾರೂ ಕೂಡ ಸಂತೋಷಪಡತಕ್ಕ ವಿಚಾರವಲ್ಲ. ಸರ್ಕಾರದ ಜವಾಬ್ದಾರಿ ಇದರಲ್ಲಿದೆ. ಇವತ್ತು ಒಂದು ಮಗು ಸತ್ತುಹೋದರೆ ಅಥವಾ ಕೊಲೆಗೆ ಒಳಪಟ್ಟರೆ ಅದು ಪ್ರಾಣಿಯಿಂದ ಅಥವಾ ಮನುಷ್ಯನಿಂದ ಆಗಿದ್ದರೆ ಅದು ಕೊಲೆ. ಅದು ಕೊಲೆಯಂತೂ ಹೌದು. ಅಲ್ಲಿ ಸಿಕ್ಕಿರತಕ್ಕ ದೇಹಗಳಿಂದ ಜನರು ಕೊಲೆ ಎಂದು ಹೇಳಿದ್ದಾರೆ. ನಾವು ಸ್ಥಳಕ್ಕೆ ಹೋಗಿಲ್ಲ. ಆ ತಾಲ್ಲೂಕಿನ ಅನೇಕ ಜನ ಮುಖಂಡರು ಬಂದು ವಿವರಗಳನ್ನು ಕೊಟ್ಟಿದ್ದಾರೆ, ಸರ್ಕಾರಕ್ಕೂ ಕೂಡ ಖಾಸಗಿಯಾಗಿ ಕೊಟ್ಟಿರಬಹುದು. ಆದರೆ ಸರ್ಕಾರದವರು ಇಲಾಖೆಯಿಂದ ವಿವರಗಳನ್ನು ಪಡೆದಿದ್ದಾರೆ, ಸಂತೋಷ. ಗೃಹ ಖಾತೆಯ ರಾಜ್ಯ ಸಚಿವರಾದ ಮಾನ್ಯ ಜಿಗಜಿಣ್ಣಿಯವರು ಅಲ್ಲಿಗೆ ಹೋಗಿದ್ದಾರೆ, ನನಗೆ ಗೊತ್ತಿದೆ. ಅವರು ಹೋಗಿದ್ದು ೧೬ನೇ ತಾರೀಖು ಎಂದು ಕಾಣುತ್ತದೆ; ಮಾನ್ಯ ಉಪಾಧ್ಯಕ್ಷರೂ ಕೂಡ ಹೋಗಿ ಬಂದಿದ್ದಾರೆ. ತಾವೂ ಕೂಡ ಬೇರೆ ತಾರೀಖಿನಲ್ಲಿ ಹೋಗಿ ಬಂದಿದ್ದೀರಿ. ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ, ಮಕ್ಕಳು ಸತ್ತಿರುವುದು ನಿಜ, ಕೊಲೆ ಆಗಿರುವುದು ನಿಜ, ಆದರೆ ಯಾರು ಮಾಡಿದ್ದಾರೆ ಎನ್ನುವುದು ಮಾತ್ರ ಪ್ರಶ್ನೆ ಇದೆ. ಇದು ದ್ವಂದ್ವವಾಗಿದೆ. ನನ್ನ ಹತ್ತಿರವೂ ಮಾಹಿತಿ ಇದೆ. ಇದು ಇಲಾಖೆಯ ಜವಾಬ್ದಾರಿಯಿದೆ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಪ್ರಕಾರ ಮೂರೂವರೆ ಅಥವಾ ನಾಲ್ಕು ತಿಂಗಳಿಂದ ಮಕ್ಕಳು ಸಾಯುತ್ತಿವೆ. ಸತ್ತಿರತಕ್ಕ ೮ ಮಕ್ಕಳಲ್ಲಿ ೬ ಹೆಣ್ಣು ಮಕ್ಕಳು, ೨ ಗಂಡು ಮಕ್ಕಳು. ಈ ೬ ಹೆಣ್ಣು ಮಕ್ಕಳು ವಿಕೃತ ರೂಪದಲ್ಲಿ ಸಾವಿಗೆ ಒಳಗಾಗಿವೆ. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಅನುಮಾನವೇನೆಂದರೆ, ಹೆಣ್ಣು ಮಕ್ಕಳು ಸಾಯುತ್ತಿವೆ ಅಂದರೆ ಯಾವುದೋ ಒಂದು ದೇವರಿಗೆ ಬಲಿ ಕೊಡತಕ್ಕ ಕಾಯಕವನ್ನು ಯಾರೋ ಕೈಗೊಂಡಿದ್ದಾರೆ, ಅವರು ಗಂಡು ಮಕ್ಕಳನ್ನು ಮುಟ್ಟುತ್ತಾ ಇಲ್ಲ, ಬರೀ ಹೆಣ್ಣು ಮಕ್ಕಳನ್ನು ಮಾತ್ರ ಎತ್ತಿಕೊಂಡು ಹೋಗಿ ಕೊಲೆ ಮಾಡುತ್ತಿದ್ದಾರೆ ಎನ್ನುವ ಅನುಮಾನ ಬರುತ್ತಿತ್ತು. ಬರೀ ಹೆಣ್ಣು ಮಕ್ಕಳು ಸಾಯುತ್ತಿದ್ದರೆ ದೇವರಿಗೆ ಬಲಿ ಕೊಡುತ್ತಿದ್ದಾರೆ ಎನ್ನುವ ಅನುಮಾನ ಬರುತ್ತದೆ ಎಂದು ಕೊಲೆ ಮಾಡತಕ್ಕವರು ಯೋಚನೆ ಮಾಡಿರಬಹುದು. ಬರೀ ಹೆಣ್ಣು ಮಕ್ಕಳನ್ನು ಕೊಂದುಬಿಟ್ಟರೆ ಅನುಮಾನ ಬರುತ್ತದೆ ಎಂದು ತಿಳಿದುಕೊಂಡು ಎರಡು ಗಂಡು ಮಕ್ಕಳನ್ನೂ ಕೊಲೆ ಮಾಡಿದ್ದಾರೆ. ಈ ಮಕ್ಕಳನ್ನು ಕೊಂದಿರತಕ್ಕ ವಿನೂತನ ವಿಧಾನ ಇದೆಯಲ್ಲಾ ಅದು ಗಂಡು ಮಕ್ಕಳಲ್ಲಿ ಬದಲಾವಣೆಯಾಗಿದೆ. ಈ ಮಾತನ್ನು ಸ್ಥಳೀಯ ಮುಖಂಡರು, ಶಾಸಕರು, ಸಾರ್ವಜನಿಕರು ತಿಳಿಸಿದ್ದಾರೆ.

೫-೦೦ ಪಿ. ಎಂ.

ಗಂಡು ಮಕ್ಕಳ ಕತ್ತನ್ನು ಕ್ಲೀನಾಗಿ ಕತ್ತರಿಸಿದ್ದರೆಂದು ನಮಗೆ ಬಂದಿರತಕ್ಕ ವರದಿ ಪ್ರಕಾರವಾಗಿ ಗೊತ್ತಾಗಿದೆ. ಅದೇ ಹೆಣ್ಣು ಮಕ್ಕಳ ಕತ್ತನ್ನು ಈ ರೀತಿಯಾಗಿ ಕತ್ತರಿಸಿಲ್ಲ. ಬರೀ ಗಂಡು ಮಕ್ಕಳ ಕತ್ತನ್ನು ಮಾತ್ರ ಕತ್ತರಿಸಲಾಗಿದೆ, ಅಂದರೆ ಬರೀ ಹೆಣ್ಣು ಮಕ್ಕಳನ್ನು ಮಾತ್ರ ಕೊಲ್ಲತಕ್ಕದ್ದೇ ಅವರ ಉದ್ದೇಶವಾಗಿದೆ, ಗಂಡು ಮಕ್ಕಳನ್ನು ಕೊಲ್ಲಬೇಕು ಎನ್ನುವ ಉದ್ದೇಶ ಅವರಿಗೆ ಇರಲಿಕ್ಕೆ ಇಲ್ಲ, ಅಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಪತ್ರಿಕೆಗಳಲ್ಲಿ ಎಲ್ಲಾ ವಿವರವಾಗಿ ಬಂದಿದೆ. ನಿಜವಾಗಿಯೂ ಈ ರೀತಿ

ಯಾಗಿ ವರದಿ ಮಾಡಿರತಕ್ಕವರನ್ನು ಮೆಚ್ಚಬೇಕಾಗುತ್ತದೆ. ಇಡೀ ರಾಜ್ಯದ ಜನತೆಗೆ ಈ ವಿಷಯ ಗೊತ್ತಾಗಲಿ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭ ಪತ್ರಿಕೆಗಳ ಇಬ್ಬರು ಪತ್ರಿಕಾ ಕರ್ತರು ಅಲ್ಲಿಗೆ ಹೋಗಿ ಸ್ವತ: ನೋಡಿಕೊಂಡು ಬಂದು ಎಲ್ಲಾ ವಿವರವನ್ನೂ ಬರೆದಿದ್ದಾರೆ. ಅವರು ಬರೆದಿರತಕ್ಕಂಥ ವಿವರಕ್ಕೂ ಮತ್ತು ನಮಗೆ ಅಲ್ಲಿಯ ಸ್ಥಳೀಯರಿಂದ ಬಂದಿರತಕ್ಕ ವರದಿಗಳಿಗೂ ಒಂದೇ ರೀತಿಯಾಗಿದೆ. ಅದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಕಣ್ಣಾರೆ ಕಂಡಿರತಕ್ಕ ಖತೀಜಾಬಿ ಮತ್ತು ಆಕೆಯ ಯಜಮಾನ ಮೊಹಮ್ಮದ್ ಇದ್ದಾರೆ. ಅವನು ನೋಡಿದ ಪ್ರಕಾರವಾಗಿ ಅವರ ದನಗಳನ್ನು ಹಿಡಿಯಲು ಒಂದು ಪ್ರಾಣಿ ಬಂದಾಗ ಖತೀಜಾಬಿ ಕೂಗಿಕೊಂಡಾಗ ಆ ಪ್ರಾಣಿ ಮೊದಲು ೪ ಕಾಲುಗಳ ಮೇಲೆ ಓಡಿದೆ, ಅನಂತರ ಅಲ್ಲಿ ಪಕ್ಕದಲ್ಲಿಯೇ ಕೆಲಸ ಮಾಡುತ್ತಿದ್ದ ಆಕೆಯ ಗಂಡ ಅಡ್ಡವಾಗಿ ಓಡಿ ಬಂದಾಗ ಅವರು ಆ ಪ್ರಾಣಿಯನ್ನು ಫಾಲೋ ಮಾಡಿದಾಗ ಆ ಪ್ರಾಣಿ ಸ್ವಲ್ಪ ದೂರ ಓಡಿ ಅನಂತರ ಎರಡು ಕಾಲುಗಳ ಮೇಲೆ ಓಡಿದೆ, ಇದನ್ನು ಅವರು ಕಣ್ಣಾರೆ ಕಂಡಿದ್ದಾರೆ. ಒಂದು ವೇಳೆ ಅದು ಪ್ರಾಣಿನೇ ಆಗಿದೆಯೆಂದು ನಮ್ಮ ಸರ್ಕಾರದವರಿಗೆ ಭಾವನೆ ಬಂದಿದ್ದರೆ ಇದರಲ್ಲಿ ನಮ್ಮ ಸರ್ಕಾರದವರ ಜವಾಬ್ದಾರಿ ಇಲ್ಲವೇ ? ಮುಖ್ಯಮಂತ್ರಿಗಳವರ ಜವಾಬ್ದಾರಿ ಇಲ್ಲವೇ ? ಒಂದು ವೇಳೆ ಪ್ರಾಣಿಯೇ ಆಗಿದ್ದರೆ ಅದು ಯಾವ ರೀತಿಯಾಗಿ ಬರುತ್ತಿದೆ, ಏನು ಮಾಡುತ್ತಿದೆ ಎನ್ನತಕ್ಕದರ ಬಗ್ಗೆ ತನಿಖೆಯನ್ನು ಇದುವರೆಗೂ ಏತಕ್ಕೆ ಮಾಡಲಿಲ್ಲ ? ಮೂರೂವರೆ ತಿಂಗಳಿಂದ ಇದು ಪ್ರಾಣಿಗಳಿಂದ ಆಗುತ್ತಿದೆಯೋ ಇಲ್ಲವೇ ಮನುಷ್ಯರಿಂದ ಆಗುತ್ತಿದೆಯೋ ಎನ್ನತಕ್ಕ ಅನುಮಾನದ ದವಡೆಯಲ್ಲಿ ಅಲ್ಲಿಯ ಜನತೆ ಸಿಕ್ಕಿಹಾಕಿಕೊಂಡಿರುವಾಗ ಅದನ್ನು ಪರಿಹಾರ ಮಾಡುವುದಕ್ಕೆ ನಿಮ್ಮಿಂದ ಇನ್ನೂ ಏತಕ್ಕೆ ಆಗಲಿಲ್ಲ ? ಇದರ ಬಗ್ಗೆ ಬಂದೋಬಸ್ತು ಮಾಡುವುದಕ್ಕೆ ನಿಮ್ಮ ಸರ್ಕಾರದಿಂದ ಏತಕ್ಕೆ ಆಗಲಿಲ್ಲ ?

ಅಧ್ಯಕ್ಷರು.—ದಯವಿಟ್ಟು ಬೇಗನೇ ಮುಗಿಸಿ, ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿರತಕ್ಕ ಒಂದು ಪ್ರಶ್ನೆ ಏನೆಂದರೆ, ಇವತ್ತು ಅಲ್ಲಿ ತನಿಖೆ ಮಾಡಿರತಕ್ಕವರು ಸ್ಥಳೀಯ ಪೋಲೀಸ್ ಅಧಿಕಾರಿಗಳು. ಇದರಿಂದಾಗಿ ಅಲ್ಲಿಯ ನಿಜಾಂಶವೇನೆಂದು ಹೊರಗಡೆ ಬರುತ್ತಿಲ್ಲ. ಆದುದರಿಂದ ಬೇರೆಯವರಿದ ತನಿಖೆ ಮಾಡಿಸಿ ಎಂದು ಅಲ್ಲಿಯ ಸ್ಥಳೀಕರು ಸರ್ಕಾರಕ್ಕೂ ಪತ್ರ ಬರೆದಿದ್ದಾರೆ ಮತ್ತು ಪತ್ರಿಕೆಗಳಿಗೂ ಸಹ ಹೇಳಿಕೆ ಕೊಟ್ಟಿದ್ದಾರೆ. ಆದುದರಿಂದ ತಾವು ಈಗಲಾದರೂ ತಕ್ಷಣವೇ ಅಲ್ಲಿಯ ಪೋಲೀಸ್ ಅಧಿಕಾರಿಗಳನ್ನು ಬದಲಾವಣೆ ಮಾಡಿ ಬೇರೆಯವರನ್ನು ಹಾಕುವುದು ಒಳ್ಳೆಯದು. ಅದನ್ನು ಬಿಟ್ಟು ಇವತ್ತು ತಾವು ಅಲ್ಲಿಗೆ ಸಿ.ಓ.ಡಿ.ಗಳನ್ನು ಕಳುಹಿಸಿದ್ದೀರಿ ಮತ್ತೆ ಬೇರೆ ಪ್ಲಟೂನ್‌ಗಳನ್ನು ಕಳುಹಿಸಿದ್ದೀರಿ, ಇವರೇನು ಬಹಳ ದೊಡ್ಡ ತನಿಖೆ ಮಾಡಿಬಿಡುತ್ತಾರೆಯೇ ? ಏನೇ ಆದರೂ ಮೊದಲು ಈಗ ಅಲ್ಲಿರತಕ್ಕ ಅಧಿಕಾರಿಯನ್ನು ತಕ್ಷಣವೇ ಬದಲಾವಣೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಬೇಗ ಮುಗಿಸಿ, ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ. ಅವರಿಗೂ ಸಹ ಕಾಲಾವಕಾಶವನ್ನು ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆದುದರಿಂದ ಸರ್ಕಾರದವರು ಯಾವ ಒಂದು ಕಾರ್ಯ ವಿಧಾನವನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಅವರಿಂದ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇದಕ್ಕಾಗಿ ಅಲ್ಲಿಯ ಜನ ಏನು ಅಭಿಪ್ರಾಯವನ್ನು ಪಡುತ್ತಿದ್ದಾರೆಂದರೆ ಪೋಲೀಸ್ ಇಲಾಖೆಯವರು ಇದನ್ನು ಪ್ರಾಣಿಗಳು ಮಾಡುತ್ತಿರುವುದು ಎಂದು ಹೇಳುತ್ತಿದ್ದಾರೆ. ಇಲ್ಲವೆಂದು ಅರಣ್ಯ ಇಲಾಖೆಯವರು ಹೇಳುತ್ತಿದ್ದಾರೆ. ಈ ಒಂದು ದ್ವಂದ್ವ ಅಭಿಪ್ರಾಯ ನಿಮ್ಮಲ್ಲಿಯೇ ಇದೆ. ಈ ದ್ವಂದ್ವ ಅಭಿಪ್ರಾಯವೇನಿದೆ ಅದನ್ನು ಇತ್ಯರ್ಥಪಡಿಸುವುದರಲ್ಲಿ ನಿಮ್ಮ ಕರ್ತವ್ಯದಲ್ಲಿ ಸಂಪೂರ್ಣವಾಗಿ ಚ್ಯುತಿ ತಂದುಕೊಳ್ಳುವುದಕ್ಕೆ ಕಾರಣವಾಗಿದೆಂದು ಹೇಳಬಯಸುತ್ತೇನೆ. ಆದುದರಿಂದ ನಾನು ಹೇಳುವುದು ಏನೆಂದರೆ, ಇದನ್ನೆಲ್ಲಾ ಪರಿಶೀಲನೆ ಮಾಡಲು ಈ ಸದನದ ಒಂದು ಸಮಿತಿ ಆಗಬೇಕು. ಆದರೆ ಸದನದ ಸಮಿತಿಯಿಂದ ತನಿಖೆ ಮಾಡುವುದಕ್ಕಾಗುವುದಿಲ್ಲ ಅದು ನನಗೆ ಗೊತ್ತು. ಆದರೆ ಅಲ್ಲಿರತಕ್ಕ ಸತ್ಯವೇನು ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು.—ಇನ್ನೂ ಮಾತನಾಡತಕ್ಕ ಸದಸ್ಯರಿದ್ದಾರೆ, ಆದಷ್ಟು ಬೇಗ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಆದುದರಿಂದ ಅಧ್ಯಕ್ಷರೇ, ವಾಸ್ತವಾಂಶವನ್ನು ಪರಿಶೀಲನೆ ಮಾಡುವುದಕ್ಕಾಗಿ ಈ ಸದನದ ಸಮಿತಿಯನ್ನು ಕಳುಹಿಸಿದರೆ ಬಹಳ ಉಪಯುಕ್ತವಾಗುತ್ತದೆ. ಸರ್ಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ ಎನ್ನತಕ್ಕ ಅಂಶವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಜೊತೆಗೆ ಸರ್ಕಾರದ ನೀತಿ ಏನಿದೆ ಅದನ್ನು ಖಂಡಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ತುಮಕೂರು).—ಮಾನ್ಯ ಅಧ್ಯಕ್ಷರೇ, ೧೬ನೇ ತಾರೀಖಿನ ಸಾಯಂಕಾಲ ಇನ್ನೊಂದು ಮಗುವಿನ ಹತ್ಯೆಯಾಯಿತೆಂದು ಗೊತ್ತಾಯಿತು ತಕ್ಷಣವೇ ನಾವು ಬೆಂಗಳೂರಿನಿಂದ ಪಾವಗಡಕ್ಕೆ ಹೋದೆವು. ತುಮಕೂರಿನ ಎಸ್. ಪಿ. ಯವರಿಂದ ವಿವರವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟೆವು. ಅವರು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅದು ಏನೆಂದರೆ, ಕೊನೆಯ ಹತ್ಯೆ ಏನಾಯಿತು ೬ನೇ ಪ್ರಕರಣದಿಂದ ಇದು ಪ್ರಾಣಿಗಳಿಂದಲೇ ಆಗಿರತಕ್ಕದ್ದು ಎನ್ನತಕ್ಕ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಇದಾದ ಮೇಲೆ ಬೆಳಿಗ್ಗೆ ಮಗುವನ್ನು ಪೋಸ್ಟ್ ಮಾರ್ಟಂಗೋಸ್ಕರವಾಗಿ ಆಸ್ಪತ್ರೆಗೆ ತಂದಿದ್ದರು ನಾವು ಅಲ್ಲಿಗೆ ಹೋದೆವು, ಹೋಗಿ ಮಗುವನ್ನು ನೋಡಿದರೆ ಪ್ರಾಣಿ ಬಲಗಡೆಯ ಭಾಗವನ್ನು ತಿಂದು ಹಾಕಿ ಬಿಟ್ಟಿದೆ. ಬಲ ಭಾಗದಲ್ಲಿ ಹಿಡಿದುಕೊಂಡಿದ್ದಕ್ಕೆ ಉಗುರುಗಳ ಗುರುತು ಹಾಗೆಯೇ ಮೂಡಿದೆ. ಮಾಂಸದ ಮುದ್ದೆ ಆಚೆಗೆ ಬಂದಿದೆ. ಇನ್ನೂ ಕೆಲವು ಭಾಗವನ್ನು ಪೂರ್ಣವಾಗಿ ತಿಂದು ಹಾಕಿ ಬಿಟ್ಟಿದೆ. ಅಲ್ಲಿ ಆ ಮಗುವಿನ ತಾಯಿ ಅಳುತ್ತಾ ಕೂತಿದ್ದಳು. ಇದರ ಬಗ್ಗೆ ಆಕೆಯ ಹತ್ತಿರ ವಿಚಾರಿಸಿದಾಗ, ನಾನು ಕಡ್ಲೆಕಾಯಿ ಕೀಳುತ್ತಾ ಕುಳಿತ್ತಿದ್ದೆ, ಆಗ ಮಗು ನನ್ನ ಬೆನ್ನು ಹಿಂದುಗಡೆಯೇ ನಿಂತಿತ್ತು. ಅದು ಕೂಗಿಕೊಂಡ ತಕ್ಷಣವೇ ತಿರುಗಿ ನೋಡಿದೆ ಆಗ ಎರಡು ಪ್ರಾಣಿಗಳು ಮಗುವನ್ನು ಎಳೆದುಕೊಂಡು ಹೋಗುತ್ತಿದ್ದುವು. ಅನಂತರ ಇನ್ನೊಂದು ಪ್ರಾಣಿ ಅದರ ಜೊತೆಯಲ್ಲಿ ಹೋಯಿತೆಂದು ಹೇಳಿದ್ದಾಳೆ. ಪಾಪ ತಾಯಿ ಕರುಳು, ಆಕೆ ಓಡಿ ಹೋಗಿ ಗಂಡನಿಗಾಗಿ ಹುಡುಕಾಡಿ ಕೂಗಾಡಿದ್ದಾಳೆ. ಆ ಪ್ರಾಣಿಗಳು ಸುಮಾರು ಅರ್ಧ ಕಿಲೋ ಮೀಟರ್ ದೂರದಲ್ಲಿ ಹೋಗುವಷ್ಟು ಹೊತ್ತಿಗೆ ಅಲ್ಲಿ ಪಕ್ಕದಲ್ಲಿಯೇ ವ್ಯವಸಾಯ ಮಾಡುತ್ತಿದ್ದ ೩ ಜನ ಗಂಡಸರು ಅಡ್ಡವಾಗಿ ಓಡಿ ಬಂದಿದ್ದಾರೆ. ಇವರು ಈ ಕಡೆಯಿಂದ ಓಡಿ ಹೋಗಿದ್ದಾರೆ, ಅವರು ಆ ಕಡೆಯಿಂದ ಓಡಿ ಬಂದಿದ್ದಾರೆ. ಹಾಗೆ ಬಂದಾಗ ಆ ಪ್ರಾಣಿಗಳು ಮಗುವನ್ನು ಬಿಟ್ಟು ಹೊರಟು ಹೋಗಿವೆ, ಬಹುಶಃ ಮಗುವಿನ ಪ್ರಾಣ ಇನ್ನೂ ಇತ್ತು ಎಂದು ಕಾಣುತ್ತದೆ. ಆ ಮಗುವನ್ನು ಅದರ ಅಮ್ಮ ತಬ್ಬಿಕೊಂಡು ಆಕೆಯ ಮೈಯೆಲ್ಲ ಪೂರ್ಣವಾಗಿ ರಕ್ತವಾಗಿದೆ. ಮಗುವಿನ ಮೈಯಲ್ಲಿ ಉಡುಪು ಇರಲಿಲ್ಲವೆಂದು ಹೇಳಿದರು. ಆದರೆ ಸ್ಥಳಕ್ಕೆ ಹೋದಾಗ ಬ್ರುಷ್ ಷರ್ಟ್ ಇದ್ದುದು ಕಂಡುಬಂತು. ಇದು ನಮ್ಮದೇ ಎಂದು ಆ ಮಗುವಿನ ಅಣ್ಣ ಹೇಳುತ್ತಾನೆ. ಅಲ್ಲಿಗೆ ನಾವು ಹೋದಾಗ ಅರಣ್ಯ ಇಲಾಖೆಯವರು, ಪೋಲೀಸ್ ಇಲಾಖೆಯವರು ಮತ್ತು ಸಿಒಡಿ. ಯವರು ಹಾಗೂ ತಜ್ಞರು ಇದ್ದರು. ಅವರನ್ನು ವಿಚಾರ ಮಾಡಿದಾಗ ಅರಣ್ಯ ಇಲಾಖೆಯವರು ಹೇಳಿದರು, ೬ನೇ ಹತ್ಯೆ ಆದಾಗ ಇದಕ್ಕೆ ಕಾರಣ ಪ್ರಾಣಿಗಳೇ ಇರಬಹುದು ಎಂಬ ನಿರ್ಣಯಕ್ಕೆ ಬಂದಿದ್ದೇವೆ ಎಂದು. ಬೇರೆಯವರು ಹೇಳಿದ ರೀತಿಯಲ್ಲಿ, ೪–೫ ದಿನಗಳ ಹಿಂದೆ ಮೂರು ಪ್ರಾಣಿಗಳು ಬಂದಿದ್ದವು, ನಾವು ಗಲಾಟೆ ಮಾಡಿದಾಗ ಓಡಿದವು ಎಂದರು. ಆ ಪ್ರದೇಶವನ್ನು ಪರಿಶೀಲನೆ ಮಾಡಿದರೆ ಅಲ್ಲಿ ಸಣ್ಣ ಸಣ್ಣ ಬೆಟ್ಟಗಳು ಇವೆ. ಅಲ್ಲಿ ಕಾಮನ ದುರ್ಗದ ಬೆಟ್ಟ ಎಂದು ಇದೆ; ಅದರಲ್ಲಿ ನೂರಾರು ಹಸುಗಳು ಹೋಗಿ ಸೇರಿವೆಯಂತೆ. ಅಲ್ಲಿ ಮನುಷ್ಯರು ಹೋಗುವುದಕ್ಕೆ ಹೆದರುತ್ತಾರಂತೆ. ಮನುಷ್ಯರನ್ನೇ ಅಟ್ಟಿಸಿಕೊಂಡು ಬಂದು ಕೊಲ್ಲುವಂಥ ಪರಿಸ್ಥಿತಿಯಲ್ಲಿ ಆ ಹಸುಗಳು ಬೆಳೆದಿವೆ ಎಂದು ಹೇಳುತ್ತಾರೆ. ಆ ದೃಷ್ಟಿಯಿಂದ ನಾವು ಪರಿಶೀಲನೆ ಮಾಡಿದಾಗ ಆ ಅಮ್ಮನ ಹೇಳಿಕೆ ಮತ್ತು ಮಗುವನ್ನು ನೋಡಿದ ರೀತಿಯಲ್ಲಿ ಹಾಗೂ ಅಲ್ಲಿನ ಪೋಲೀಸರ ವರದಿಯನ್ನು ನೋಡಿದರೆ ನಿಜವಾಗಿ ಯಾವುದೋ ಎಚ್ಚರಿಕೆಯಿಂದ ಕೆಲಸ ಮಾಡುವ ಕೆಲವು ಪ್ರಾಣಿಗಳು ಈ ಕೆಲಸ ಮಾಡುತ್ತಿವೆ ಎಂಬುದನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ೫ ಹತ್ಯೆಗಳು ಆದಾಗ ಕೆಲವು ಕಿರುಬಗಳನ್ನು ಕೊಂದರಂತೆ. ಆಮೇಲೆ, ಇನ್ನು ಮುಂದೆ ಈ ರೀತಿ ಆಗುವುದಿಲ್ಲ ಎಂಬ ಭಾವನೆ ಅಲ್ಲಿನ ಜನರಿಗೆ ಬಂದಿದ್ದಾಗ ಮತ್ತೆ ಈ ರೀತಿ ಆದುದನ್ನು ನೋಡಿ ಆಶ್ಚರ್ಯವಾಗಿದೆ. ಆ ಮಗುವನ್ನು ನೋಡಿದರೆ ಮನುಷ್ಯರು ಅಷ್ಟು ಕೆಟ್ಟ ಕ್ರೂರಿಗಳೇ, ಮನುಷ್ಯರು ಮಕ್ಕಳ ಮಾಂಸವನ್ನು ತಿನ್ನುತ್ತಾರೆಯೇ ಎಂಬ ಸಂಶಯ ಬರುತ್ತದೆ. ಆ ಮಗುವನ್ನು ಎಳೆದುಕೊಂಡು ಹೋದ ಕಡೆಯೆಲ್ಲಾ ರಕ್ತ ಬಿದ್ದಿದೆ, ಮತ್ತು ಸುಮಾರು ಒಂದು ಫರ್ಲಾಂಗ್ ದೂರ ಎಳೆದುಕೊಂಡು ಹೋಗಿದೆ. ಇದರ ಬಗ್ಗೆ ಒಂದು ಖಚಿತವಾದ ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಾಗದಿದ್ದರೂ ಅಲ್ಲಿ ಸಂಗ್ರಹಿಸಿರುವ ಮಾಹಿತಿ ಪ್ರಕಾರ ಯಾವುದೋ ಪ್ರಾಣಿಗಳು ಈ ಕೆಲಸ ಮಾಡುತ್ತಿವೆ ಎಂದು ಹೇಳಬಯಸುತ್ತೇನೆ.

ಶ್ರೀ ಬಿ. ಭೈರಪ್ಪಾಜಿ. (ತುರುವೇಕೆರೆ).— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲ ಸ್ನೇಹಿತರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ, ಅಲ್ಲಿ ೪—೫ ಕೊಲೆಗಳು ನಡೆದ ನಂತರ ತುಮಕೂರಿನಿಂದ ಅನೇಕ ಜನ ಪತ್ರಿಕೋದ್ಯಮಿಗಳು ಸ್ಥಳಕ್ಕೆ ಹೋಗಿದ್ದರು. ಅಲ್ಲಿಯುವರೆಗೆ ಹೆಣ್ಣು ಮಕ್ಕಳ ಕೊಲೆಯಾಗಿದೆ ಅವರು ಹೇಳತಕ್ಕ ರೀತಿಯಲ್ಲಿ ಹಾಗೂ ಅಲ್ಲಿನ ಜನಗಳು ಹೇಳತಕ್ಕ ರೀತಿಯಲ್ಲಿ ಕೈಯನ್ನು ಒಂದು ಬಂಡೆ ಮೇಲೆ ಇಟ್ಟಿದ್ದಾರೆ, ಅಲ್ಲಿ ಯಾವ ರಕ್ತದ ಕಲೆಯೂ ಇಲ್ಲ; ಮಗುವಿನ ಶಿರಸ್ಸನ್ನು ತೆಗೆದು ಬೇರೆ ಒಂದು ಕಡೆ ಇಟ್ಟಿದ್ದಾರೆ, ಅಲ್ಲಿ ಕೂಡ ರಕ್ತದ ಕಲೆ ಇಲ್ಲ, ಬಟ್ಟೆ ತೆಗೆದಿಟ್ಟಿದ್ದಾರೆ, ಅಲ್ಲಿಯೂ ರಕ್ತದ ಕಲೆ ಇಲ್ಲ, ಇದನ್ನೆಲ್ಲ ಪತ್ರಿಕೆಯವರು ನೋಡಿಕೊಂಡು ಬಂದು ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಅಲ್ಲಿನ ಜನಗಳು ಕೂಡ ಸಾಮಾನ್ಯವಾಗಿ ಈ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇಷ್ಟಾದರೂ ಕೂಡ, ಅಲ್ಲಿ ಕಳೆದ ೪ ತಿಂಗಳುಗಳಿಂದ ಅಮಾನುಷ ಕೃತ್ಯ ನಡೆಯುತ್ತಿದ್ದರೂ ಸಹ ಸರ್ಕಾರ ಸಾಕಷ್ಟು ಜವಾಬ್ದಾರಿಯಿಂದ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡಿಲ್ಲವೆಂದು ವ್ಯಥೆ ಪಡಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ೬ ಹೆಣ್ಣುಮಕ್ಕಳ ಕೊಲೆಯಾಗಿದೆ. ಗಂಡು ಮಕ್ಕಳು ಆ ಪ್ರಾಣಿಗಳಿಗೆ ಸಿಗಲಿಲ್ಲವೆ ? ಆ ಪ್ರದೇಶದಲ್ಲಿ ಬೇಕಾದಷ್ಟು ನಾಯಿಗಳನ್ನು ಸಾಕಿದ್ದಾರೆ. ಪ್ರಾಣಿ ಬಂದು ಕೊಲೆ ಮಾಡತಕ್ಕ ಸಂದರ್ಭದಲ್ಲಿ ಆ ಗ್ರಾಮದಲ್ಲಿರುವ ನಾಯಿಗಳು ಬೊಗಳದೆ ಇರುತ್ತಿದ್ದವೆ ? ಇನ್ನೊಂದು ವರ್ತಮಾನ ಏನೆಂದರೆ, ಜೀಪು ಬಂದಿದೆ, ಶಬ್ದ ಕೇಳಿದ ಜನರಿದ್ದಾರೆ, ಆ ಸಂದರ್ಭದಲ್ಲಿ ಈ ಘಟನೆಗಳು ನಡೆದಿವೆ ಎಂದು, ಇದು ಪ್ರಾಣಿಯಿಂದಲೇ ನಡೆದಿದೆ ಎಂದು ಬಹಳ ಜನ ಪತ್ರಿಕೋದ್ಯೋಗಿಗಳು ಮತ್ತು ಸಾರ್ವಜನಿಕರು ಹೇಳುವ ಮಾತಿನ ಆಧಾರದ ಮೇಲೆ ಅನುಮಾನ ಪಡಬೇಕಾಗುತ್ತವೆ. ಪ್ರಾಣಿಯಿಂದ ಈ ಹತ್ಯೆ ನಡೆದಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳು ಇಲ್ಲವೆಂಬುದನ್ನು ನಾನು ಹೇಳಬಯಸುತ್ತೇನೆ. ಆದರೆ ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಮುಂದಾದರೂ ಕೂಡ ಸರ್ಕಾರ ಅಲ್ಲಿನ ಜನತೆಯಲ್ಲಿ ಹುಟ್ಟಿರತಕ್ಕ ಭೀತಿಯ ವಾತಾವರಣವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಯಾವ ರೀತಿ ಈ ಒಂದು ನಿಗೂಢವಾದ ವ್ಯವಹಾರ ಅಲ್ಲಿ ನಡೆಯುತ್ತಿದೆ, ಕೊಲೆಗಳು ಆಗುತ್ತಿವೆ, ಮಕ್ಕಳ ಅಪಹರಣವಾಗುತ್ತಿದೆ ಅದನ್ನು ತಪ್ಪಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಈಗಲಾದರೂ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜಿ ಮಹೇಶ್ವರಪ್ಪ.—ಈ ಜಾಲ ಬೇರೆ ಕಡೆ ವಿಸ್ತರಿಸಿದ ಹಾಗೆ ಕಾಣುತ್ತದೆ. ದಾವಣಗೆರೆಯಲ್ಲಿ ೩ ವರ್ಷದ ಮಗು ಶಾಲೆಯಲ್ಲಿದ್ದುದನ್ನು ಅಪರಿಚಿತ ವ್ಯಕ್ತಿಯೊಬ್ಬ ಕರೆದುಕೊಂಡು ಹೋಗಿ ೨೫ ದಿನಗಳಾದರೂ ಪತ್ತೆಯಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು—ಆ ಮಗು ಭದ್ರಾವತಿಯಲ್ಲಿ ಸಿಕ್ಕಿತು. ಒಂದು ಕಡೆ ಪ್ರಾಣಿ, ಮತ್ತೊಂದು ಕಡೆ ಮನುಷ್ಯ ಎಂದು ವಾದ ಮಾಡುವುದು, ನಾವೊಂದು ಹೇಳುವುದು ಆಗಿದೆ. ಬಹುಶಃ ಇದು ಮನುಷ್ಯ ಪ್ರಾಣಿಯಿಂದ ಆದುದು ಎಂದು ಹೇಳಬಹುದು. ಮನುಷ್ಯ ಪ್ರಾಣಿ ಮಾಡಿದ ತಪ್ಪನ್ನು ಪ್ರಾಣಿಯಾಗಿ, ನಾಯಿಯಾಗಿ, ಶಕ್ತಿಯಾಗಿ ತೋರಿಸಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಾಯಿ ಬಂದದ್ದು ಮಿಲಿಟರಿ ಹೋಟಲಿಗೆ ಹೋಗಿದೆಯಂತೆ. ಅಲ್ಲಿಂದ ಬಸ್ ಹತ್ತಿ ಕುಳಿತಿದೆಯಂತೆ. ಆಮೇಲೆ ಅದು ಸಿನೇಮಾ ಟಾಕೀಸಿಗೆ ಹೋಗಿ ಕುಳಿತಿದೆಯಂತೆ. ಮನುಷ್ಯ ಪ್ರಾಣಿ ಮಗುವನ್ನು ಎಲ್ಲೆಲ್ಲಿ ತೆಗೆದುಕೊಂಡು ಹೋಗಿದೆಯೋ ಅಲ್ಲೆಲ್ಲ ನಾಯಿ ಹೋಗಿದೆಯಂತೆ, ಇಂಥ ನಿದರ್ಶನ ಇರುವಾಗ ಒಂದು ಕಡೆ ಪ್ರಾಣಿಗಳು, ಮತ್ತೊಂದು ಕಡೆ ಮನುಷ್ಯರು ಎನ್ನುತ್ತಾರೆ. ನಾನು ಮನುಷ್ಯ ಪ್ರಾಣಿ ಎಂದು ಹೇಳುತ್ತೇನೆ. ಆದ್ದರಿಂದ, ನಮ್ಮ ನಾಯಕರು ಏನು ಹೇಳಿದ್ದಾರೆ ಆ ಪ್ರಕಾರ ಅದನ್ನು ಪರಿಶೀಲನೆ ಮಾಡಿಕೊಂಡು ಬರಲು ನಿಮ್ಮ ಕಡೆಯ ಸದಸ್ಯರನ್ನೊಳಗೊಂಡ ಸದನದ ಸಮಿತಿಯನ್ನು ಕಳುಹಿಸಿಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಸದನದ ಸದಸ್ಯರು ಅಲ್ಲಿಗೆ ಹೋಗಿ ಬಂದವರೇ ಹೇಳುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಮನುಷ್ಯ ಪ್ರಾಣಿ ಮಾಡಿದ ತಪ್ಪನ್ನು ನಾಯಿಯಾಗಿ, ಪ್ರಾಣಿಯಾಗಿ ತೋರಿಸಲಾಗುತ್ತಿದೆ. ಇದಕ್ಕೆ ನಿದರ್ಶನ ಇದೆ, ಟೇಪ್ ರೆಕಾರ್ಡರ್ ಇದೆ ಫೋಟೋ ಕೂಡ ತೆಗೆದಿದ್ದಾರೆ. ಆದ್ದರಿಂದ, ಇದನ್ನು ಪರಿಶೀಲಿಸಲು ಸದನದ ಸಮಿತಿ ಹೋಗಿಬರಲಿ ಮತ್ತು ಸತ್ಯಾಂಶವನ್ನು ಹೊರತರಲಿ ಎಂದು ಹೇಳುತ್ತೇನೆ. ಇದನ್ನು ಅವರ ಭಾಗದವರು ಕೂಡ ಒಪ್ಪಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಪಾವಗಡ ಪಟ್ಟಣದಲ್ಲಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಸಾವಿಗೀಡಾದಂಥ ಚಿಕ್ಕ ಮಕ್ಕಳ ಬಗ್ಗೆ ನಾನು ಸಂತಾಪ ಸೂಚನೆ ಮಾಡುತ್ತೇನೆ, ಮತ್ತು ಅವರ ತಂದೆತಾಯಿಂಗಳಿಗೆ ನನ್ನ ಸಹಾನುಭೂತಿಯನ್ನೂ ವ್ಯಕ್ತ ಮಾಡುತ್ತೇನೆ. ನಾನು ಮೊದಲೆ ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ, ಇದರಲ್ಲಿ ಸರ್ಕಾರ ಮುಚ್ಚಿಡತಕ್ಕದ್ದು ಏನೂ ಇಲ್ಲ. ಮೊದಲು ಈ ಬಗ್ಗೆ ನಿಲುವಳಿ ಸೂಚನೆ ತರಬೇಕೆಂದು ಒತ್ತಾಯ ಮಾಡಿದಾಗ ನಾನು ಈ ಮಾತನ್ನು ಹೇಳಿದ್ದೆ. ಇದರಲ್ಲಿ ಮುಚ್ಚಿಡತಕ್ಕದ್ದು ಏನಿದೆ ? ಇದರಲ್ಲಿ ಮನುಷ್ಯನ ಕೈವಾಡ ಇದೆಯೋ ಅಥವಾ ಕೇವಲ ಪ್ರಾಣಿಯದೋ ಅದನ್ನು ನಾವು ಹುಡುಕಿ ತೆಗೆಯಬೇಕು. ಕೆಲವು ಜನರ ಅಭಿಪ್ರಾಯವಷ್ಟೇ ಅಲ್ಲ, ಪ್ರಚಾರ ಏನೆಂದರೆ, ಇದು ಪ್ರಾಣಿ ಕೆಲಸ ಅಲ್ಲ, ಮನುಷ್ಯನ ಕೆಲಸ ಎಂಬುದು. ಮೊನ್ನೆ ಅಂದರೆ ಈ ತಿಂಗಳ ೧೭ನೇ ತಾರೀಖು ಆದ ಘಟನೆಗೆ ಸಂಬಂಧಪಟ್ಟಂತೆ ಕೆಲ ಜನರು ಈ ಅಭಿಪ್ರಾಯ ಪಟ್ಟಿದ್ದಾರೆ. ಮೂರು ಜನರು ತೋಳದ ವೇಷದಲ್ಲಿ ಬಂದು ಮಗುವನ್ನು ಕೊಲ್ಲುವುದಕ್ಕೆ ಪ್ರಯತ್ನಮಾಡಿ ಎರಡು ಕಾಲಿನಲ್ಲಿ ಓಡಿಹೋದರು ಎಂಬ ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ನಂಬಬಹುದೋ ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು. ಒಂದು ವೇಳೆ ಒಬ್ಬ ಮನುಷ್ಯ ಪ್ರಾಣಿಯ ವೇಷದಲ್ಲಿ, ಸೋಗಿನಲ್ಲಿ ಈ ದುಷ್ಕೃತ್ಯವನ್ನು ಮಾಡಬೇಕೆಂದಿದ್ದರೆ ಅವನು ಎರಡು ಜನರನ್ನು ಕರೆದುಕೊಂಡು ಬರುವುದಿಲ್ಲ. ಒಂದು ವೇಳೆ ಯಾರಾದರೂ ಕಣ್ಣಿನಿಂದ ನೋಡಿ ಅವರನ್ನು ಬೆನ್ನಟ್ಟಿಕೊಂಡು ಹೋದರೆ ಅವರು ಸಿಕ್ಕಬೇಕಾಗಿತ್ತು. ತೋಳ ಇರಲಿ, ಹೈನ ಇರಲಿ, ಹುಲಿ ಇರಲಿ, ಇವೆಲ್ಲಾ ಮನುಷ್ಯನಿಗಿಂತ ವೇಗವಾಗಿ ಓಡಬಲ್ಲದು. ಆದರೆ ಮನುಷ್ಯರೆ ಅದರ ಬೆನ್ನಟ್ಟಿಕೊಂಡು ಹೋದಾಗ ಸಿಗದೇ ಇರತಕ್ಕದ್ದು ಕಲ್ಪನೆಗೂ ನಿಲುಕದಂಥ ವಿಚಾರ. ಅವರು ಸಿಕ್ಕೇ ಸಿಕ್ಕುತ್ತಿದ್ದರು. ಈಗ ಈ ಘಟನೆಗಳು ಯಾವರೀತಿ ನಡೆಯಿತು ಎಂಬುದನ್ನು ಸಂಕ್ಷಿಪ್ತವಾಗಿ ನಾನು ಸದನದ ಮುಂದೆ ಹೇಳಲಿಕ್ಕೆ ಬಯಸುತ್ತೇನೆ. ಮೊಟ್ಟ ಮೊದಲನೇ ಘಟನೆಯಾದದ್ದು ೨೯-೪-೧೯೮೩ರಲ್ಲಿ. ನಾನು ಆಗಲೇ ಹೇಳಿದೆ ಮೊನ್ನೆ ಈ ತಿಂಗಳಲ್ಲಿ ಆಗಿರತಕ್ಕ ಘಟನೆ, ೧೬ ಮತ್ತು ೧೭ನೇ ತಾರೀಖಿಗೆ ಆಗಿರತಕ್ಕ ಘಟನೆ. ಈ ಮೂರು ಘಟನೆಗಳನ್ನು ಬಿಟ್ಟರೆ ಬಾಕಿ ಎಲ್ಲಾ ಘಟನೆಗಳೂ ಸೂರ್ಯಾಸ್ತದ ನಂತರ ನಡೆದ ಘಟನೆಗಳು. ಮತ್ತು ಎಲ್ಲಾ ಘಟನೆಗಳಲ್ಲಿ ಜೀವವನ್ನು ಕಳೆದುಕೊಂಡ ಮಕ್ಕಳು ಹೆಣ್ಣು ಮಕ್ಕಳು. ತಂದೆ ತಾಯಿಗಳಿಗಿದ್ದಂಥ ಒಂದೇ ಒಂದು ಹೆಣ್ಣು ಮಗು ಜೀವ ಕಳೆದುಕೊಂಡಿದೆ. ಅಂಥದ್ದೇ ಐದೂ ಪ್ರಕರಣಗಳಲ್ಲಿ ಆಗಿವೆ, ಇದರ ಜೊತೆಗೆ ಇದೆಲ್ಲಾ ಘಟನೆ ಆದದ್ದು ಹುಣ್ಣಿಮೆ ರಾತ್ರಿ ಎಂಬ ಪ್ರಚಾರವೂ ನಡೆಯಿತು. ಹಳ್ಳಿಯಲ್ಲಿ ಈ ತರಹ ಒಂದಾದಮೇಲೆ ಒಂದು ಘಟನೆ ಆದಾಗ ಜನರ ಮನಸ್ಸಿನಲ್ಲಿ ಎರಡು ತರಹದ ಭಾವನೆಗಳು ಬರುತ್ತದೆ. ಒಂದು ಆತಂಕ, ಹೆದರಿಕೆ ; ನಾಳೆ ನಮ್ಮ ಮಕ್ಕಳಿಗೆ ಏನಾಗುತ್ತದೋ ಎಂಬ ಆತಂಕ ಉಂಟಾಗುತ್ತದೆ. ಎರಡನೆಯದು ರೂಮರ್‌ಗಳು ಹರಡುತ್ತವೆ. ಅವರ ಮನೆ ಮಕ್ಕಳನ್ನು ಎತ್ತಿಕೊಂಡು ಹೋದರಂತೆ ಇವರ ಮನೆ ಮಕ್ಕಳನ್ನು ಎತ್ತಿಕೊಂಡು ಹೋದರಂತೆ ಎಂಬ ರೂಮರ್‌ಗಳು ಬರುತ್ತವೆ. ಇದರಿಂದ ಜನರಲ್ಲಿ ಭಯವುಂಟಾಗುತ್ತದೆ. ಸಾಧು ಲಕ್ಷ್ಮಣಗಿರಿ ಘಟನೆ ಬೆಂಗಳೂರಿನಲ್ಲಿ ಆಯಿತು, ಅದನ್ನಿನ್ನೂ ಜನ ಮರೆತಿಲ್ಲ. ಅಂಥ ಭಯಾನಕ ಘಟನೆ ಇಲ್ಲಿ ಆಯಿತು, ಇದೇ ರೀತಿ ಅಲ್ಲಿ ಕೂಡ ಆಗಿರಬಹುದೇನೋ ಎಂಬ ಕಲ್ಪನೆಯನ್ನು ಕೆಲವು ಜನರು ಮಾಡಿ ಅದಕ್ಕೆ ಬಣ್ಣ ಬಳಿದರೆ ನಾನವರನ್ನು ದೂಷಣೆ ಮಾಡುವುದಿಲ್ಲ. ಯಾರೋ ಹೇಳಿದರು ಈ ಘಟನೆಗಳು ಹುಣ್ಣಿಮೆ ದಿವಸ ಆಗುತ್ತಿದೆ ಎಂದು. ಸಾಧು ಲಕ್ಷ್ಮಣಗಿರಿ ಪ್ರಕರಣ ಅಮಾವಾಸ್ಯೆ ದಿವಸ ಆಗಿರಬಹುದು. ಇದು ಹುಣ್ಣಿಮೆ ದಿವಸ ಆಗಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಒಳಗಾದ ಎಲ್ಲ ಮಕ್ಕಳೂ ೫ ವರ್ಷಕ್ಕಿಂತ ಕಡಿಮೆ ವಯಸ್ಸಾಗಿರುವ ಮಕ್ಕಳು. ಮೊನ್ನೆ ಆಗಿರುವುದಕ್ಕಿಂತಲೂ ಮೊದಲಿನ ಪ್ರಕರಣದ ಬಗ್ಗೆ ನಾನು ಹೇಳುತ್ತಿರುವುದು. ೧೫ ದಿವಸಗಳಿಗೊಂದು ಸಾರಿ ಅಮಾವಾಸ್ಯೆ ಮತ್ತು ಹುಣ್ಣಿಮೆ ಬರುತ್ತದೆ. ೧೫ ದಿವಸಕ್ಕೆ ಒಂದು ಸಲ ಬರತಕ್ಕದ್ದು ಅಮಾವಾಸ್ಯೆ, ಅದರ ನಂತರ ೧೫ ದಿವಸಕ್ಕೆ ಒಂದು ಸಲ ಹುಣ್ಣಿಮೆ ಬರುತ್ತದೆ. ೮ ದಿವಸಕ್ಕೊಂದು ಸಾರಿ ಅಮಾವಾಸ್ಯೆ ಮತ್ತು ಹುಣ್ಣಿಮೆ ಬರುವುದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಇದಕ್ಕೆ, ಈ ಕಲ್ಪನೆಗೆ ತಳಹದಿ ಇಲ್ಲ ಎಂದಾಯಿತು. ೨೪-೪-೧೯೮೩ರಲ್ಲಿ ೭ ಗಂಟೆಗೆ ದಾಸಮನಹಳ್ಳಿಯಲ್ಲಿ ಶ್ರೀಮತಿ ಅಂಜಮ್ಮ ಮತ್ತು ಸಣ್ಣಮುನಿಯಪ್ಪ ಇವರ ೫ ವರ್ಷದ ಮಗಳನ್ನು ರಾತ್ರಿ ಮಲಗಿದ್ದಾಗ ಅಪಹರಿಸಿಕೊಂಡು ಹೋಯಿತು. ಎರಡನೆ ಘಟನೆ ಆದದ್ದು ೯-೫-೧೯೮೩ರಲ್ಲಿ. ಅದು ಭೂಪರಹಳ್ಳಿಯಲ್ಲಿ ಆಯಿತು. ೫ ವರ್ಷದ ವೆಂಕಟಲಕ್ಷಮ್ಮ ಎಂಬ ಹುಡುಗಿ ಪ್ರಾಣಿ ಬರತಕ್ಕದನ್ನು ನೋಡಿ ಚೀರಿದಳು. ಆದರೆ ಬೇರೆಯವರು ರಕ್ಷಣೆಗೆ ಬರುವುದಕ್ಕೆ ಮೊದಲೇ ಆ ಹುಡುಗಿಯನ್ನು ಪ್ರಾಣಿ ಎತ್ತಿಕೊಂಡು ಕತ್ತಲೆಯಲ್ಲಿ ಅದೃಶ್ಯವಾಯಿತು. ಬಾಕಿಯವರೂ

ಚೀರಿದ್ದರಿಂದ ಆ ಹೆಣ್ಣುಮಗುವನ್ನು ಆ ಪ್ರಾಣಿ ಎತ್ತಿಕೊಂಡು ಹೋಗಲಿಲ್ಲ. ಮಗುವಿಗೆ ಕುತ್ತಿಗೆಯ ಮೇಲೆ ಗಾಯ ಮಾತ್ರ ಆಗಿದೆ. ಅದೇ ದಿವಸ ಬೊಮ್ಮಗಾನಹಳ್ಳಿಯಲ್ಲಿ ೩ನೇ ಘಟನೆ ನಡೆಯಿತು. ರಾತ್ರಿ ತಾಯಿ ಪಕ್ಕದಲ್ಲಿ ಮಲಗಿದ್ದ ೯ ತಿಂಗಳ ಮಗು ಅತ್ಯಂತ ಹಸುಳೆಯನ್ನು ಎತ್ತಿಕೊಂಡು ಹೋಯಿತು. ಈ ಮಗುವಿನ ಯಾವುದೇ ಅವಶೇಷ ಸಿಗಲಿಲ್ಲ. ೪ನೇ ಘಟನೆಯಾದದ್ದು ದಿನಾಂಕ ೧೫-೫-೧೯೮೩ರಲ್ಲಿ ರಾತ್ರಿ ೧೧ ಗಂಟೆಗೆ ಕಡ್ಲೆಹಳ್ಳಿ ನಾಯಕರ ಹಟ್ಟಿಯಲ್ಲಿ. ಅಲ್ಲಿ ಎರಡು ವರ್ಷದ ನಾಗಮಣಿ ಎಂದು ಹೇಳತಕ್ಕ ಹೆಣ್ಣುಮಗುವಿನ ಅಪಹರಣ ಆಯಿತು. ಆ ಮೇಲೆ ಈ ಮಗುವಿನ ಅವಶೇಷ ಸ್ವಲ್ಪ ಸಿಕ್ಕಿತು. ಆದರ ನಂತರ ದಿನಾಂಕ ೨೩-೫-೧೯೮೩ಕ್ಕೆ ಪಾವಗಡ ಪಟ್ಟಣದ ಬೋವಿ ಕಾಲೋನಿಯಲ್ಲಿ ಮೂರು ವರ್ಷದ ಆದಿಲಕ್ಷ್ಮಿ ಎಂಬ ಮಗುವಿಗೆ ಅಟ್ಯಾಕ್ ಆಯಿತು. ಈ ಮಗುವನ್ನು ಎತ್ತಿಕೊಂಡು ಹೋಗುವುದನ್ನು ಆಕೆಯ ತಾಯಿ ನೋಡಿದಳು. ನಂತರ ಮಗುವಿನ ಕಾಲಿನ ಕೆಳಗಿನ ಅವಶೇಷ ಸಿಕ್ಕಿತು. ಕಾಲಿನ ಚಿತ್ರ ನಮ್ಮ ಹತ್ತಿರ ಇದೆ, ಅದನ್ನು ಬೇಕಾದರೆ ತೋರಿಸುತ್ತೇನೆ. ಅದನ್ನು ನೋಡಿದರೆ ಕಡಿದದ್ದು ಎಂದು ಕಾಣುವುದಿಲ್ಲ, ತಿಂದಿದ್ದು ಎಂದು ಕಾಣುತ್ತದೆ. ಆದಾದಮೇಲೆ ೨೬-೭-೧೯೮೩ರಲ್ಲಿ ೬ನೇ ಘಟನೆ ನಡೆಯಿತು. ಇದು ಪಾವಗಡದಿಂದ ಮೂರು ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ನಡೆಯಿತು. ೪ ವರ್ಷದ ವೆಂಕಟಸುಬ್ಬಮ್ಮ ಎಂಬ ಮಗುವನ್ನು ಪ್ರಾಣಿ ಎತ್ತಿಕೊಂಡು ಹೋದಮೇಲೆ ಆ ಮಗುವಿನ ತಲೆ ಬುರುಡೆ ಮತ್ತು ಜುಟ್ಟಿನ ಕೂದಲು ಸಿಕ್ಕಿದೆ. ತಲೆ ಬುರುಡೆ ಮತ್ತು ಇತರ ಅವಶೇಷವನ್ನು ರಾಸಾಯನಿಕ ಪರೀಕ್ಷೆಗಾಗಿ ಫೋರೆನ್‌ಸಿಕ್ ಲ್ಯಾಬೊರೇಟರಿಗೆ ಕಳುಹಿಸಿಕೊಟ್ಟಿದ್ದಾರೆ ; ಅದರ ವರದಿ ಇನ್ನೂ ಬಂದಿಲ್ಲ. ಅದರ ನಂತರ ಆದದ್ದು ಈ ತಿಂಗಳಿನಲ್ಲಿ ಆದ ಘಟನೆ. ೧೬ನೇ ತಾರೀಖಿನವರೆಗೂ ಸರ್ಕಾರ ಕೈಗೊಂಡ ಕ್ರಮಗಳ ಫಲವಾಗಿ ಮತ್ತು ಅಲ್ಲಿಯ ಜನರಿಗೆ ಸರ್ಕಾರ ಕೊಟ್ಟಿರತಕ್ಕ ಮುಂಜಾಗರೂಕತೆ ಫಲವಾಗಿ ಜನರು ಜಾಗೃತರಾಗಿರುವ ಕಾರಣದಿಂದ ಇನ್ನು ಮುಂದೆ ಇಂಥ ಘಟನೆ ನಡೆಯುವುದಿಲ್ಲ ಎಂಬ ಆಸೆ ನಮ್ಮಲ್ಲಿ ಉಂಟಾಯಿತು. ೨೬ರ ನಂತರ ೧೬ನೇ ತಾರೀಖಿನವರೆಗೆ ಯಾವುದೇ ಘಟನೆ ನಡೆಯಲಿಲ್ಲ. ಆದರೆ ೧೬ನೇ ತಾರೀಖು ದುರ್ದೈವದಿಂದ ಪುನಃ ಇಂಥದ್ದೇ ಘಟನೆ ನಡೆಯಿತು. ಹಿಂದಿನ ಘಟನೆಗಳಿಗೂ ಇದಕ್ಕೂ ಇರುವ ಮಹತ್ವದ ವ್ಯತ್ಯಾಸ ಎಂದರೆ ಈ ಘಟನೆ ಮಧ್ಯಾಹ್ನ ೪ ಗಂಟೆಗೆ ಆಯಿತು. ಈ ಮಗುವಿನ ತಾಯಿ ಹೊಲದಲ್ಲಿ ಕಡ್ಲೆಕಾಯಿ ಕೀಳುತ್ತಿದ್ದಾಗ "ನಾಯಿ ಬಂತು" ಎಂದು ಮಗು ಕೂಗಿಕೊಂಡಿತು. ತಾಯಿ ಆ ಕಡೆ ನೋಡುವುದರೊಳಗಾಗಿ ಆ ಮಗುವನ್ನು ಒಂದು ಪ್ರಾಣಿ ಎತ್ತಿಕೊಂಡುಹೋಯಿತು. ಅನಂತರ ಸುತ್ತಮುತ್ತಲಿನ ಜನರು ಬೆನ್ನಟ್ಟಿಕೊಂಡು ಹೋದಾಗ ಮಗುವನ್ನು ಅದು ಬಿಟ್ಟುಹೋಯಿತು, ಅಷ್ಟರಲ್ಲಿ ಮಗುವಿನ ಪ್ರಾಣ ಹೋಗಿತ್ತು.

೫-೩೦ ಪಿ. ಎಂ.

ಇಲ್ಲಿಯವರೆಗೂ ಮತ್ತು ೧೭ನೇ ತಾರೀಖು ಏನು ಘಟನೆ ಆಯಿತು ಅಲ್ಲಿಯವರೆಗೆ ಬರುತ್ತೇನೆ. ಅಲ್ಲಿಯವರಿಗೆ ಯಾರೂ ಕೂಡಾ ಇದರಲ್ಲಿ ಪ್ರಾಣಿಯ ಹೊರತಾಗಿ ಬೇರೆ ಯಾವುದೇ ಮನುಷ್ಯನಾಗಲೀ, ಬೇರೆ ಯಾವುದೇ ಪವಾಡವಾಗಲೀ, ತಾಂತ್ರಿಕತೆಯಾಗಲೀ ಇದೆ ಎನ್ನುವ ಅನುಮಾನವನ್ನು ಕೂಡ ವ್ಯಕ್ತಪಡಿಸಿಲ್ಲ. ೧೬ನೇ ತಾರೀಖಿನ ದಿವಸ ಆದ ಘಟನೆ ಬಗ್ಗೆ ನಾನು ಹೇಳಿದೆ. ಈ ಘಟನೆಯಲ್ಲಿ ಸಣ್ಣ ಹೀರಣ್ಣ ಎನ್ನುವ ಬಾಲಕನ ಮೇಲೆ ಆಕ್ರಮಣವಾಗಿದೆ. ಮೊದಲ ಸಲ ಹಿಂದೆ ಆದ ಘಟನೆಗಳಿಗೂ ಇದಕ್ಕೂ ವ್ಯತ್ಯಾಸ ಎಂದರೆ ಇದು ಹಗಲು ನಡೆದಿದ್ದು ಮೊದನೇ ಸಲ ಗಂಡು ಮಗುವಿನ ಮೇಲೆ ಆಕ್ರಮಣ ಆಗಿದೆ. ಮಾನ್ಯ ಅಧ್ಯಕ್ಷರೇ, ಇದೊಂದು ಹೃದಯ ವಿದ್ರಾವಕವಾದ ದೃಶ್ಯ. ನಾನು ಈ ಈ ಫೋಟೋವನ್ನು ತಮಗೂ ವಿರೋಧ ಪಕ್ಷದ ನಾಯಕರಿಗೂ ಮತ್ತು ಇನ್ನಿತರ ಸದಸ್ಯರಿಗೂ ತೋರಿಸುತ್ತೇನೆ.

(ಮಾನ್ಯ ಮುಖ್ಯಮಂತ್ರಿಗಳು ಛಾಯಾಚಿತ್ರವನ್ನು ತೋರಿಸಿದರು) ಈ ಚಿತ್ರವನ್ನು ನೋಡಿದರೇ ಗೊತ್ತಾಗುತ್ತದೆ, ಯಾರೋ ಮನುಷ್ಯರು ಕೊಲೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನನ್ನಲ್ಲಿ ನಾಲ್ಕು ಚಿತ್ರಗಳು ಇವೆ. ಒಂದು ಪ್ರಾಣಿ ತನ್ನ ತೀಕ್ಷ್ಣವಾದ ಉಗುರಿನಿಂದ ಯಾವ ರೀತಿ ಹೊಟ್ಟೆಯ ಕರುಳನ್ನು ಬಗೆದಿದೆಯೆಂದು ಗೊತ್ತಾಗುತ್ತದೆ, ಚರ್ಮ ಹೋಗಿದೆ, ಕರುಳು ಹೊರಗೆ ಬಂದಿದೆ. ಇದು ೧೬ನೇ ತಾರೀಖು ಆಯಿತು. ೧೭ನೇ ತಾರೀಖಿನ ಮಧ್ಯಾಹ್ನ ೧ ಗಂಟೆಯ ಸಮಯ, ಆ ದಿನ ಪಾವಗಡದಿಂದ ಸುಮಾರು ೫ ಕಿಲೋಮೀಟರ್ ದೂರದ

ಬಲವಳ್ಳಿ ಎಂಬಲ್ಲಿ ಒಂದು ಘಟನೆ ನಡೆದಿದೆ. ಅಲ್ಲಿ ಪಾರ್ವತಿ ಎಂದು ಹೇಳುವ ಚಿಕ್ಕ ಮಗುವಿನ ಮೇಲೆ ಅಟ್ಯಾಕ್ ಮಾಡಿದೆ. ಒಂದು ನಾಯಿಯಂತಹ ಪ್ರಾಣಿ ಮಗುವನ್ನು ಎತ್ತಿಕೊಂಡು ಹೋಯಿತು. ಆಗ ಸುತ್ತಮುತ್ತಲಿನ ಜನ ಗಲಾಟೆ ಮಾಡಿದರು. ಆಗ ಅದು ಮಗುವನ್ನು ಬಿಟ್ಟು ಹೋಯಿತು. ಈ ಮಗುವಿನ ಚಿತ್ರವನ್ನು ನೋಡಿದರೆ ಈ ಮಗುವಿನ ಮೋರೆ ಮೇಲೆ ಒಂದು ಗಾಯವಾಗಿದೆ. ಅದು ಮನುಷ್ಯನ ಕೈಯಿಂದ ಮಾಡಿರುವಂತಹ ಗಾಯ ಅಲ್ಲ. ಅದನ್ನು ನೋಡಿದರೆ ಪ್ರಾಣಿಯ ಹಲ್ಲು ಅಥವಾ ಉಗುರಿನಿಂದ ಆಗಿರುವಂತಹ ಗಾಯ ಎಂಬಂತೆ ತೋರುತ್ತದೆ. ಸುದೈವದಿಂದ ಆಕೆ ಬದುಕಿಕೊಂಡಿದ್ದಾಳೆ. ಆಕೆಗೆ ಚಿಕಿತ್ಸೆಯನ್ನು ಕೊಡಲಾಗಿದೆ. ಅದೇ ದಿವಸ ೧೭ನೇ ತಾರೀಖು ಬಹುಶಃ ತೋಳ ಇರಬಹುದು ಅಥವಾ ಮತ್ತೊಂದು ಪ್ರಾಣಿ ಇರಬಹುದು ಅದು ಸಮಾಧಾನ ಆಗಿರಲಿಲ್ಲವೆಂದು ಕಾಣುತ್ತದೆ ಸಂಜೆ ನಾಲ್ಕೂವರೆ ಗಂಟೆಯ ಸಮಯದಲ್ಲಿ ಇದೇ ಪ್ರಾಣಿಯಿಂದಲೋ ಅಥವಾ ಬೇರೆಯದರಿಂದಲೋ ಮತ್ತೆ ಅಟ್ಯಾಕ್ ಆಗಿದೆ. ಅಲ್ಲಿನವರ ಪ್ರಕಾರ ೩ ಕಾಡು ಪ್ರಾಣಿಗಳು ಎತ್ತಿಕೊಂಡು ಹೋದವು ಎಂದು ವರದಿ ಇದೆ. ಆ ಹುಡುಗ ಅಸ್ಲಾಂನ ಚಿತ್ರ ಇಲ್ಲಿದೆ. (ಭಾವಚಿತ್ರವನ್ನು ತೋರಿಸಿದರು(ಅದೇ ರೀತಿ ಕರಳು ಕಿತ್ತಿದೆ. ನಾನು ಅದನ್ನು ಇಲ್ಲಿ ಪ್ರದರ್ಶನ ಮಾಡಲು ತಂದಿಲ್ಲ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಸಂದೇಹ ಇದೆ, ಇದು ಮನುಷ್ಯರಿಂದ ಆಗಿರತಕ್ಕುದ್ದು ಎಂದು, ಆ ಸಂದೇಹ ಸ್ವಲ್ಪಮಟ್ಟಿಗೆ ನಿವಾರಣೆ ಆಗಬಹುದು ಎನ್ನುವ ಉದ್ದೇಶದಿಂದ ನಾನು ತೋರಿಸುತ್ತಿದ್ದೇನೆ. ಈ ಚಿತ್ರಗಳನ್ನು ನೋಡಿದರೆ ನಮ್ಮ ಕರುಳೇ ಹೊರಗೆ ಬಂದಂತಾಗುತ್ತದೆ. ಕುತ್ತಿಗೆ, ಕರುಳು ಮತ್ತು ಹಿಂದೆ ಹಿಪ್ಸ್‌ನ್ನು ಪೂರಾ ಕಿತ್ತು ಹಾಕಲಾಗಿದೆ. ಯಾರೇ ಮನುಷ್ಯರು ಕೊಲೆ ಮಾಡಬೇಕೆಂದಿದ್ದರೆ ಈ ರೀತಿ ಕೊಲೆ ಮಾಡುವುದಿಲ್ಲ. ಈ ಗಾಯಗಳು ಯಾವುದೇ ಹರಿತವಾದ ಅಥವಾ ಒರಟಾದ ಆಯುಧಗಳಿಂದ ಅದಂತಹ ಗಾಯಗಳಲ್ಲ. ಆದುದರಿಂದ ನನ್ನ ಮನಸ್ಸಿನಲ್ಲಂತೂ ಏನೂ ಸಂದೇಹ ಉಳಿದಿಲ್ಲ. ಇದು ಯಾವುದೇ ಒಂದು ಪ್ರಾಣಿ ತೋಳ ಇರಬಹುದು, ಹೈನಾ ಎಂದರೆ ಕಿರುಬ ಇರಬಹುದು.ಆದರೆ ಕಿರುಬ ಮನುಷ್ಯ ಮಾಂಸವನ್ನು ಕೊಂದು ತಿನ್ನಲು ಹೋಗುವುದಿಲ್ಲ· ಹುಲಿ ಅಥವಾ ತೋಳ ಮುಂತಾದ ಪ್ರಾಣಿಗಳು ಕೊಂದು ತಿಂದು ಬಿಟ್ಟುಹೋದ ಮಾಂಸವನ್ನು ಕಿರುಬಗಳು ತಿನ್ನುತ್ತವವೇ ಹೊರತು ತಾನಾಗಿಯೋ ಅವು ಒಬ್ಬರ ಮೇಲೆ ಅಟ್ಯಾಕ್ ಮಾಡುವುದಾಗಲೀ, ಮಾಂಸವನ್ನು ತಿನ್ನುವುದಾಗಲಿ ಮಾಡುವುದಿಲ್ಲ. ಆದ್ದರಿಂದ ಇದರ ಹಿನ್ನೆಲೆಯನ್ನು ನಾವು ನೋಡಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೆ ಏನಾದರೂ ಹಿನ್ನೆಲೆ ಇವೆಯೋ ? ಶ್ರೀಮಾನ್ ಲಕ್ಷ್ಮೀನರಸಿಂಹಯ್ಯನವರು ಅಲ್ಲಿರತಕ್ಕ ನೈಸರ್ಗಿಕ ಪರಿಸ್ಥಿತಿ ಬಗ್ಗೆ ಹೇಳಿದರು. ಅಲ್ಲಿ ಗುಡ್ಡಗಾಡು ಇದೆ, ಅಲ್ಲಿ ಪೋಲೀಸ್ ನಾಯಿ ತೆಗೆದುಕೊಂಡು ಹೋದಾಗ ಅದು ಕೋಟೆಯ ತುದಿಯವರೆಗೆ ಹೋಗಿ ನಿಂತಿತು. ಅಲ್ಲಿ ಒಂದು ಇಟ್ಟಂಗಿ ಗೋಡೆ ಇದೆ. ಇದು ಅಲ್ಲಿಯವರೆಗೆ ಹೋಗಿ ನಿಂತಿದೆ. ಆ ಕೋಟೆಗೆ ಇರುವ ಬಾಗಿಲು ಸಂಪೂರ್ಣವಾಗಿ ಬಂದ್ ಆಗಿಲ್ಲ, ಆ ಕೋಟೆಯ ಗೋಡೆಯಿಂದ ಮುಂದಕ್ಕೆ ಹೋಗಲು ಮತ್ತೊಂದು ಮಾರ್ಗ ಇದೆ. ಆ ನಾಯಿ ಅಲ್ಲಿ ಒಳಗಡೆ ಹೋಗಿಲ್ಲ. ಶ್ರೀಮಾನ್ ಜಿಗಜಿಣಗಿಯವರು, ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರು, ಅರಣ್ಯ ಖಾತೆಯ ಮುಖ್ಯಾಧಿಕಾರಿಗಳು ಮತ್ತು ವನ್ಯ ಮೃಗಗಳ ಖಾತೆಯ ಮುಖ್ಯಾಧಿಕಾರಿಗಳು ಎಲ್ಲರೂ ಒಟ್ಟಿಗೆ ಅಲ್ಲಿಗೆ ಹೋಗಿದ್ದಾರೆ. ಅದೂ ೧೫–೨೦ ದಿವಸಗಳ ಹಿಂದೆ ಹೋಗಿದ್ದಾರೆ. ಒಂದು ಸಲ ಅಥವಾ ಎರಡು ಸಲ ಆಗಿದ್ದರೆ ಇದು ಅಕಸ್ಮಾತ್ ಆಗಿದೆ ಎಂದು ಹೇಳಬಹುದಿತ್ತು. ಈ ವಿಷಯದ ಬಗ್ಗೆ ಮಾತನಾಡುವಾಗ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಮಲೆನಾಡಿನ ಪರಿಸರದ ವಿಷಯದ ಮಾನ್ಯ ಬಂಗಾರಪ್ಪನವರಿಗೆ ಗೊತ್ತಿದೆ. ಮಾನ್ಯ ಮೊಯಿಲಿಯವರಿಗೆ ಈ ಬಗ್ಗೆ ಅಷ್ಟಾಗಿ ಗೊತ್ತಿಲ್ಲ ಎಂದು ಕಾಣುತ್ತದೆ. ಕಾರಣ ಅವರ ಊರಿನ ಕಡೆ ಹೆಚ್ಚು ಹುಲಿಗಳು ಉಳಿದಿಲ್ಲ. ನಾನು ಚಿಕ್ಕಂದಿನವನಾಗಿದ್ದಾಗ ನಡೆದ ಘಟನೆ ಇದು. ನಮ್ಮ ಸ್ವಂತದ್ದೇ ಎರಡು ಕೊಟ್ಟಿಗೆಗಳು ನಮ್ಮ ಊರಿನಲ್ಲಿ ಇವೆ. ಒಂದು ಕೊಟ್ಟಿಗೆಯಲ್ಲಿ ಬರಡು ದನಗಳನ್ನು ಕಟ್ಟುತ್ತಿದ್ದೆವು. ಅದರಲ್ಲಿ ಸುಮಾರು ೨೦–೩೦ ದನಗಳು ಇರುತ್ತಿದ್ದವು. ಮತ್ತೊಂದು ಕೊಟ್ಟಿಗೆಯಲ್ಲಿ ಹಾಲು ಕರೆಯತಕ್ಕಂತಹ ಸುಮಾರು ೧೫–೨೦ ದನಗಳು ಇರುತ್ತಿದ್ದವು. ಈ ವಿಷಯ ನಡೆದದ್ದು ಸುಮಾರು ೩೫ ವರ್ಷಗಳ ಹಿಂದಿನದು. ನನಗೆ ಜ್ಞಾಪಕ ಇರುವಂತೆ ಕನಿಷ್ಟ ಪಕ್ಷ ೪ ಸಾರಿ ಕೊಟ್ಟಿಗೆಗೆ ಹುಲಿ ಬಂದು ಕರುಗಳನ್ನು ಎತ್ತಿಕೊಂಡು ಹೋಗಿದೆ. ಹುಲಿಗಳು ದೊಡ್ಡ ದನಗಳನ್ನು ಮುಟ್ಟುವುದಿಲ್ಲ. ಸಣ್ಣ ಕರುಗಳನ್ನು ಮಾತ್ರ ಇಲ್ಲಿ (ಕತ್ತಿನ ಭಾಗವನ್ನು ತೋರಿಸುತ್ತಾ) ಕಚ್ಚಿ ಅವುಗಳನ್ನು ಹೊತ್ತುಕೊಂಡು ಹೋಗುತ್ತಿದ್ದವು. ಅವು ಕರುಗಳನ್ನು ದರದರನೆ ಎಳೆದುಕೊಂಡು ಹೋಗುವುದಿಲ್ಲ. ಶ್ರೀಮಾನ್

ಮೊಯ್ಲಿಯವರು ಹೇಗೆ ಎತ್ತುಕೊಂಡು ಹೋಗುತ್ತವೆ ಎಂದು ಕೇಳಿದರು. ಅದಕ್ಕೆ ಹೇಳುತ್ತಿದ್ದೇನೆ. ಪ್ರಾಣಿಗಳನ್ನು ಹೇಗೆ ಸಾಯಿಸಿ ಹೇಗೆ ಹೊತ್ತುಕೊಂಡು ಹೋಗಬೇಕೆಂದು ಅವುಗಳಿಗೆ ಹುಟ್ಟಿನಿಂದಲೇ ಬಂದಿರುತ್ತದೆಂದು ಕಾಣುತ್ತದೆ. ಮತ್ತೆ ನಾಯಿ ವಿಚಾರವನ್ನು ಅವರು ಹೇಳಿದರು. ಒಂದು ಮನೆಯಲ್ಲಿ ಮಗುವನ್ನು ಎತ್ತಿಕೊಂಡು ಹೋಗ ಬೇಕಾದರೆ ಅಲ್ಲಿ ನಾಯಿ ಇತ್ತು. ಆದರೆ ಆ ನಾಯಿ ಕೂಡಾ ಕೂಗಲಿಲ್ಲ. ಇದಕ್ಕೇ ನಾನು ಒಂದು ಹಿನ್ನೆಲೆ ಹೇಳುತ್ತೇನೆ. ಇಲ್ಲಿ ಸಿ ಒ ಡಿ. ಯವರು ಎನ್‌ಕ್ವಯರಿ ಮಾಡುತ್ತಿದ್ದಾರೆ. ಈ ಬಗ್ಗೆ ಸಂಪೂರ್ಣ ವರದಿ ಯಾವಾಗ ಬರುತ್ತದೆಯೋ ಆಗ ಅದು ಮಾನ್ಯ ಸದಸ್ಯರಿಗೆ ಬೇಕು ಎಂದರೆ ಅದನ್ನು ಬಹಿರಂಗಪಡಿಸುತ್ತೇನೆ. ಅಲ್ಲಿನ ಸುತ್ತಮುತ್ತಲ ಎಲ್ಲಾ ಪ್ರದೇಶಗಳಿಗೆ ನಮ್ಮ ಪೋಲೀಸ್ ಅಧಿಕಾರಿಗಳು ಹೋಗಿ ಬಂದಿದ್ದಾರೆ. ಪಾವಗಡದ ಪಕ್ಕದಲ್ಲಿನ ಮಡಕಶಿರದಲ್ಲಿನ ಸಬ್-ಇನ್ಸ್‌ಪೆಕ್ಟರಾಕವರ ಹತ್ತಿರ ನಮ್ಮ ಅಧಿಕಾರಿಗಳು ಹೋಗಿ ಮಾತನಾಡಿದ್ದಾರೆ. ಅಲ್ಲಿ ಹಿಂದೆ ೧೯೮೦-೮೧ನೇ ವರ್ಷದಲ್ಲಿ ಸುಮಾರು ೧೫ ರಿಂದ ೨೦ ಘಟನೆಗಳು ಇಂತಹದ್ದು ಆಗಿದ್ದು ಅಲ್ಲಿ ೧೫ ವರ್ಷಗಳ ಒಳಗಿನ ಮಕ್ಕಳನ್ನು ಎತ್ತಿಕೊಂಡು ಹೇಗಿವೆ. ಅದೂ ೫-೬ ವರ್ಷದ ಮಕ್ಕಳನ್ನು ಅಲ್ಲ. ಅಲ್ಲಿಯೂ ಮಕ್ಕಳ ಮೇಲೆ ಆಕ್ರಮಣ ನಡೆದಿದ್ದು ಬರೀ ಚಿಕ್ಕ ಮಕ್ಕಳ ಮೇಲೆ ಆಕ್ರಮಣ ನಡೆದಿಲ್ಲ. ಇದು ಆದ ಮೇಲೆ ಏನು ಮಾಡಿದರು ಎಂದರೆ ಸಂಬಂಧಪಟ್ಟ ಖಾತೆಯವರೆಲ್ಲಾ ಸೇರಿ ಒಂದು ದೊಡ್ಡ ಕೂಂಬಿಂಗ್ ವ್ಯವಸ್ಥೆ ಮಾಡಿದರು.

ಸಿಡಿಮದ್ದನ್ನು ತಿಂಡಿಯಲ್ಲಿ ಇರುವಂತೆ ವ್ಯವಸ್ಥೆ ಮಾಡಿದ್ದರು. ಅಕ್ಕಿ ಪಿಕ್ಕರನ್ನು ಕರೆದುಕೊಂಡು ಬಂದರು. ಉತ್ತಮ ಭೇಟೆಗಾರರನ್ನು ಕರೆದುಕೊಂಡು ಬಂದರು. ಅನಂತಪುರ ಜಿಲ್ಲೆಗೆ ಸೇರಿದ ಮೂರು ತಾಲ್ಲೂಕುಗಳು ಅಂದರೆ, ಪೆನುಕೊಂಡ, ಹಿಂದೂಪುರ ಹಾಗೂ ಮಡಕಸಿರಾ ಇವುಗಳ ಭೂಗೋಳಿಕ ಸಿದ್ಧತಿ ಪಾವಗಡ ತಾಲ್ಲೂಕಿನ ಸಿದ್ಧತಿ ಇದ್ದ ಹಾಗೆ ಇದೆ. ಪಾವಗಡದ ಭೌಗೋಳಿಕ ಪರಿಸ್ಥಿತಿ ಹೇಗಿದೆ ಅಂದರೆ, ದೊಡ್ಡ ದೊಡ್ಡ ಬಂಡೆಗಳು, ಬಟ್ಟಂ ಬಯಲು ಪ್ರದೇಶ, ಸಾಮಾನ್ಯವಾದ ಗುಡ್ಡಗಳು, ಕುರುಚಲು ಕಾಡುಗಳಿಂದಲೂ ಕೂಡಿದೆ. ಇದನ್ನೆಲ್ಲಾ ಮಾಡಿದ ಮೇಲೆ ಇಂಥ ಘಟನೆ ಅಲ್ಲಿ ಆಗಲಿಲ್ಲ. ಈಗ ಸರ್ಕಾರ ತೆಗೆದುಕೊಂಡಂಥ ಕ್ರಮ ಏನು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆ ಘಟನೆ ಯಾವ ದಿವಸ ಅಂದರೆ ೯-೮-೧೯೮೩ ರಂದು ನಡೆಯಿತು, ತಕ್ಷಣವೇ ಜಿಲ್ಲಾ ರಿಸರ್ವ್‌ಪೋಲೀಸ್‌ರ ಒಂದು ದಳವನ್ನು ಕಳುಹಿಸಲಾಯಿತು, ನಂತರ ಕರ್ನಾಟಕ ರಿಸರ್ವಪೋಲೀಸ್ ದಳವನ್ನು ಕೂಡಲೇ ಕಳುಹಿಸಲಾಯಿತು. ಜನಗಳಿಗೆ ಧೈರ್ಯ ಬರಬೇಕು, ಮತ್ತೆ ಇಂಥ ಘಟನೆ ಆಗಬಹುದು ಎಂಬ ಕಾರಣದಿಂದ ಇಷ್ಟು ಮಾಡಲಾಯಿತು. ೨೬ರ ನಂತರ ಒಂದು ತುಕಡಿ ಪೋಲೀಸನ್ನು ವಾಪಸ್ಸು ತರಿಸಲಾಯಿತು. ಪಾವಗಡದ ಸುತ್ತ ಸುಮಾರು ೨೦ ಮೈಲಿ ದೂರದಲ್ಲಿರುವ ಎಲ್ಲಾ ಹಳ್ಳಿಗಳಲ್ಲಿಯೂ ಡಂಗೂರ ಹೊಡೆಸಿ. ಅಪಾಯ ಇದೆ, ಹೊರಗಡೆ ಯಾರೂ ಮಲಗಬಾರದು. ಒಳಗಡಿ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಮಲಗಬೇಕೆಂದು ಪ್ರಚಾರ ಮಾಡಿಸಲಾಗಿದೆ. ಮಕ್ಕಳನ್ನು ಎಲ್ಲೂ ಹೊರಗಡೆ ಕಳುಹಿಸಬೇಡಿ—ಹೀಗೆ ಪ್ರತಿಯೊಂದು ಹಳ್ಳಿಯಲ್ಲೂ ವಿಚಾರವನ್ನು ಟಾಂಟಾಂ ಮಾಡಿಸಿದ್ದೇವೆ. ಇದಾದ ಮೇಲೆ ಸಿಕ್ಕಿದ ತಲೆಬುರುಡೆಯನ್ನೂ ಕೂಡ ಕೆಮಿಕಲ್ಸ್ ಎಕ್ಸಾಮಿನೇಷನ್‌ಗೆ ಕಳುಹಿಸಿಕೊಡಲಾಗಿದೆ. ಮತ್ತು ಪೋಲೀಸ್ ನಾಯಿಗಳನ್ನು ಉಪಯೋಗ ಮಾಡಲಾಗಿದೆ. ನಿನ್ನೆ ನಡೆದಂಥ ಘಟನೆ ಬಗ್ಗೆ ಬಹಳಷ್ಟು ಉಗ್ರವಾದ ಅಭಿಪ್ರಾಯವನ್ನು ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದ್ದಾರೆ. ಅಲ್ಲಿನ ಜನರು ಹಾಹಾರಿದ್ದಾರೆ, ತಾಲ್ಲೂಕು ಆಫೀಸ್ ಮತ್ತು ಪೋಲೀಸ್ ಠಾಣೆಗೆ ಹೋದಾಗ ಅವರ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆಂದು ಹೇಳಿದರು. ನಾನು ವರದಿಯನ್ನು ಮೂರು ಕಡೆಯಿಂದ ತರಿಸಿಕೊಂಡಿದ್ದೇನೆ. ಪತ್ರಿಕಾ ಪ್ರತಿನಿಧಿಗಳನ್ನು ವಿಚಾರ ಮಾಡಿದ ಮೇಲೆ ಸ್ವಲ್ಪ ಮಟ್ಟಿಗೆ ಲಾಠಿಚಾರ್ಜ್ ಮಾಡಿದ್ದಾರೆಂದು ಹೇಳಿದರು. ಆದರೆ ಯಾರಿಗೂ ಗಾಯ. ಮಾಸಿ ಆಗಿಲ್ಲ. ೨-೩ ಕಲ್ಲುಗಳು ಬಿದ್ದವು ಎಂದು ಪತ್ರಿಕಾ ಪ್ರತಿನಿಧಿಗಳು ಹೇಳಿದರು. ನಾನು ನಂಬುವುದು ಸರ್ಕಾರದ ಸಿಬ್ಬಂದಿಯಿಂದ ಬಂದಂಥ ಮಾಹಿತಿಯನ್ನು. ಮೂರು ಕಡೆಯಿಂದ ಬಂದಂಥ ಸಮಾಚಾರದ ಪ್ರಕಾರ ಲಾಠಿ ಚಾರ್ಜ್ ಏನೂ ಆಗಿಲ್ಲ, ಕಲ್ಲು ಎಸೆಯುತಕ್ಕಂಥಾದ್ದು ದೊಡ್ಡ ಪ್ರಮಾಣದಲ್ಲಿ ನಡೆದಿಲ್ಲ. ಇದರ ಮಧ್ಯೆ ಜನ ಊರಿನಲ್ಲಿ ಒಂದು ಸುದ್ದಿಯನ್ನು ಹಬ್ಬಿಸಿದರು. ನಾಲ್ಕು ಮಕ್ಕಳು ಕಾಣೆಯಾಗಿವೆ ಎಂದು ಇಂಥ ಒಂದು ಪ್ರಕ್ಷಬಂಧಿ ಪರಿಸ್ಥಿತಿಯಲ್ಲೂ ಇಂಥ ಒಂದು ರೋಮರ್ ಹಬ್ಬಿಸಿದರು. ಸಾಮಾನ್ಯವಾಗಿ ಇಂಥ ಸನ್ನಿವೇಶದಲ್ಲಿ ಮನಸ್ಸು ಮತ್ತಷ್ಟು ಪ್ರಕ್ಷುಬ್ಧಗೊಳ್ಳುತ್ತೆ. ಅಲ್ಲಿನ ಜನತೆ ಭಯದಿಂದ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದರು, ಪೋಲೀಸ್

ಅಧಿಕಾರಿಗಳು ಧೈರ್ಯ ಹೇಳಿದರು. ನಾಲ್ಕು ಮಕ್ಕಳು ಕಾಣೆಯಾಗಿಲ್ಲವೆಂದು ಅಷ್ಟೊತ್ತಿಗೆ ವಿಷಯ ಕೂಡ ತಂದೆ ತಾಯಿಗಳಿಗೆ ಗೊತ್ತಾಯಿತು, ಜನ ೨-೩ ಕಲ್ಲು ಹೊಡೆದರು. ಶ್ರೀಮಾನ್ ಮಹಮದ್ ಸಾಹೇಬರು ಹೇಳಿದ್ದನ್ನು ಮಾನ್ಯ ಮೊಯ್ಲಿಯವರು ಹೇಳಿದರು. ಈ ಘಟನೆಯಾಗುವವರೆಗೆ ಮಕ್ಕಳನ್ನು ಕಳೆದುಕೊಂಡಂಥ ಸಂದೆತಾಯಿಗಳ ಬಾಯಿನಿಂದಲೂ ಮನುಷ್ಯರನ್ನು ನೋಡಿದ್ದೇವೆ. ಮನುಷ್ಯರ ಆಕೃತಿಯನ್ನು ನೋಡಿದ್ದೇವೆಂದು ಹೇಳುವಂಥಾದ್ದು ಬಂದಿಲ್ಲ. ಎಲ್ಲರೂ ಕೂಡ ಬೂದು. ಬಣ್ಣದ, ನಾಯಿ ಆಕಾರದ ಪ್ರಾಣಿಯನ್ನು ನೋಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ಮೊಯ್ಲಿಯವರು ಮಹಮದ್ ಸಾಹೇಬರನ್ನು ಟಿ.ಬಿ.ಗೆ ಕರೆದುಕೊಂಡು ಹೋದಿರಿ, ಅಲ್ಲಿ ಎರಡು ಗಂಟೆಗಳ ಕಾಲ ಇಟ್ಟಿರಿ, ಹೊರಗಡೆ ಬಂದಾಗ ಮೋರೆಯಲ್ಲಾ ವಿವರ್ಣವಾಗಿತ್ತು, ಬಿಳುಪಾಗಿತ್ತು, ದೈಹಿಕವಾಗಿ ಅಥವಾ ಮಾನಸಿಕವಾಗಿ ಟಾರ್ಚರ್ ಮಾಡಿದಿರೋ ಏನೋ ಗೊತ್ತಿಲ್ಲವೆಂದು ಹೇಳಿದರು. ಕೊಲೆ ಆಪಾದನೆಯವರನ್ನು ಹುಡುಕುತ್ತಿದ್ದೇವೆಯೇ? ಕಳ್ಳತನ ಮಾಡಿರುವವರನ್ನು ಹುಡುಕುತ್ತಿದ್ದೇವೆಯೋ ? ಏತಕ್ಕೆ ಅವರ ಮೇಲೆ ಟಾರ್ಚರ್ ಮಾಡಬೇಕು ? ಮಹಮದ್‌ರವರಿಗೀತಲೂ ಅವರ ಪತ್ನಿ ಜಾಣೆ ಇದ್ದಾಳೆ. ಮಹಮದ್‌ರವರು ಒಂದು ಸಲ ಒಂದು ರೀತಿ ಹೇಳುತ್ತಾರೆ, ಇನ್ನೊಂದು ಸಲ ಇನ್ನೊಂದು ರೀತಿ ಹೇಳುತ್ತಾರೆ, ಮಗು ತೀರಿಕೊಂಡಿದ್ದಕ್ಕೆ ಹಾಗೆ ಆಗಿದೆಯೋ ಅಥವಾ ಅವರು ಯಾವಾಗಲೂ ಅದೇ ರೀತಿ ಹೇಳುತ್ತಾರೋ ಗೊತ್ತಿಲ್ಲ. ಅಥವಾ ಪೋಲೀಸಿನವರು ದಸ್ತಗಿರಿ ಮಾಡಬಹುದೆಂಬ ಭಯದಿಂದ ಆ ರೀತಿ ಹೇಳುತ್ತಿದ್ದಾರೋ ಏನೋ ಗೊತ್ತಿಲ್ಲ. ಅವರ ಮೇಲೆ ಟಾರ್ಚರ್ ಆಗಲಿ ಒತ್ತಾಯವಾಗಲಿ ಮಾಡಿಲ್ಲ. ಅವರ ಒಂದು ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಹೇಳುವುದು ಹೇಗೆ. ಅವರ ಸ್ವಂತ ವರ್ಷನನ್ನು ನಂಬತಕ್ಕಂಥಾದ್ದು ಹೇಗೆ? ಇವತ್ತು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅಲ್ಲಿಗೆ ಹೋಗಿದ್ದಾರೆ, ಇದು ಎರಡನೇ ಸಲ. ಸಿ.ಓ.ಡಿ ಯವರು ಸ್ವತಂತ್ರವಾಗಿ ತನಿಖೆ ನಡೆಸುತ್ತಿದ್ದಾರೆ. ಅರಣ್ಯ ಖಾತೆಯ ಮುಖ್ಯ ಅಧಿಕಾರಿಗಳು ಹೋಗಿದ್ದಾರೆ. ವನ್ಯಮೃಗಗಳ ಖಾತೆಯ ಮುಖ್ಯಾಧಿಕಾರಿಗಳು ಹೋಗಿದ್ದಾರೆ. ಫೋರೆನಿಕ್ ವೈದ್ಯ ಸೋಮಣ್ಣನವರು ಹೋಗಿದ್ದಾರೆ. ಅಲ್ಲಿನ ಪ್ರದೇಶವನ್ನು ಕೂಂಚ ಮಾಡುವುದಕ್ಕೆ ಏನೇನು ಮಾಡಬೇಕೋ ಅವೆಲ್ಲವನ್ನೂ ಮಾಡುತ್ತಿದ್ದಾರೆ. ಇದು ಬಹಳ ಕಷ್ಟದಾಯಕವಾದ ಕೆಲಸ, ಎನ್‌ಕ್ಲೋಸ್ಡ್ ಏರಿಯಾ ಅಲ್ಲ. ವಿಸ್ತಾರವಾದಂಥ ಪ್ರದೇಶ, ಮತ್ತೊಂದು ಕಡೆಗೆ ತಾಕಿದ್ದಂಥ ಆಂಧ್ರಪ್ರದೇಶ ಅಲ್ಲಿ ಎಷ್ಟು ದೂರ ಪ್ರಾಣಿಗಳನ್ನು ಅಟ್ಟಬಹುದೋ ನನಗೆ ಗೊತ್ತಿಲ್ಲ. ಆದರೂ ಕೂಡ ಇವತ್ತು ಅಲ್ಲಿ ೫ ಪೋಲೀಸ್ ತುಕಡಿಗಳು ಇವೆ. ಅರಣ್ಯ ಇಲಾಖೆಯ ತಜ್ಞರು ಇದ್ದಾರೆ, ಸಿ.ಓ.ಡಿ.ಯವರು ಇದ್ದಾರೆ, ಬೆರಳಚ್ಚು ತಜ್ಞರು ಇದ್ದಾರೆ, ನಾನು ಕೊನೆಗೆ ಇಷ್ಟು ಹೇಳುತ್ತೇನೆ. ಸರ್ಕಾರ ಇದನ್ನು ಶೋಧನೆ ಮಾಡಲಿಕ್ಕೆ, ಇನ್ನು ಮುಂದೆ ಇದು ಆಗದ ರೀತಿ ನೋಡಿಕೊಳ್ಳಲಿಕ್ಕೆ ಎಂಥ ಕ್ರಮ ಬೇಕಾದರೂ ತೆಗೆದುಕೊಳ್ಳುತ್ತೇವೆ. ಇದಕ್ಕಾಗಿ ಎಷ್ಟು ದುಡ್ಡು ಖರ್ಚಾದರೂ ಚಿಂತೆಯಿಲ್ಲ. ನಮಗೆ ಇದರಲ್ಲಿ ವನ್ಯಪ್ರಾಣಿ ಹೊರತಾಗಿ ಬೇರೆಯವರ ಕೈವಾಡ ಇದೆ ಎಂದು ಅನುಮಾನಕ್ಕೆ ಆಸ್ಪದ ಇಲ್ಲ. ಮನುಷ್ಯರ ಕೈವಾಡ ಇದೆ ಎಂದು ಗೊತ್ತಾದರೆ, ಆಗ ತೆಗೆದುಕೊಳ್ಳಂಥ ಕ್ರಮ ಬೇರೆಯಾಗುತ್ತದೆ. ನನ್ನ ಹತ್ತಿರ ಫೋಟೋ ಇದೆ, ಇದು ಮನುಷ್ಯರ ಹೆಜ್ಜೆಯಿಂದ ಹೇಳುವುದು ಕಷ್ಟ, ತಮಗೆ ಕಳುಹಿಸಿಕೊಡುತ್ತೇನೆ ನೋಡಿ. ಇಲ್ಲಿಯವರೆಗೆ ನಮಗೆ ಸಿಕ್ಕಿರುವಂಥ ಆಧಾರದ ಮೇಲೆ ಪ್ರಾಣಿ ಹೊರತಾಗಿ ಬೇರೆಯಾವುದೂ ಇಲ್ಲ. ಮಾನ್ಯ ಸದಸ್ಯರಿಂದ ಸ್ವಾಮಿರಾವ್‌ರವರು ಮನುಷ್ಯ ಪ್ರಾಣಿ ಎಂದೂ ಹೇಳಿದರು. ಒಂದು ದೃಷ್ಟಿಯಿಂದ ನಾವೆಲ್ಲಾ ಪ್ರಾಣಿಗಳೇ.

ಅಧ್ಯಕ್ಷರೆ, ಅದರ ಬಗ್ಗೆ ಸರಿಯಾಗಿ ಗೊತ್ತಾಗುವವರೆಗೂ ನಾನು ಸಂಶಯಪಡಲಾರೆ. ಜನತೆಗೆ ಇಷ್ಟು ಆಶ್ವಾಸನೆ ಕೊಡಲಿಕ್ಕೆ ಬಯಸುತ್ತೇನೆ. ಜನತೆ ಅಂಜತಕ್ಕದ್ದು, ಭಯಪಡತಕ್ಕದ್ದು ಇಲ್ಲ. ಆದರೂ ಅವರು ಮುಂಜಾಗರೂಕತೆಯಿಂದ ಇರತಕ್ಕದ್ದು ಅಗತ್ಯವಿದೆ. ಅವರು ಹಗಲು ಮತ್ತು ಸಾಯಂಕಾಲ ಆದಮೇಲೆ ಚಿಕ್ಕ ಚಿಕ್ಕ ಮಕ್ಕಳನ್ನು ಒಬ್ಬೊಬ್ಬರನ್ನೇ ಹೊರಗಡೆ ಬಿಡಕೂಡದು. ರಾತ್ರಿಯ ಹೊತ್ತು ಬಾಗಿಲುಗಳನ್ನು ಬಂದ್ ಮಾಡಿಕೊಂಡು ಮಕ್ಕಳನ್ನು ಮನೆಯೊಳಗೆ ಮಲಗಿಸಿಕೊಂಡು ಇರಿದೇಕು. ಇಷ್ಟು ಈ ಮನೆಯ ಮುಖಾಂತರ ಅಲ್ಲಿಯ ಜನತೆಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ದಾಖಲೆಗಳ ವರದಿಯ ಪ್ರಕಾರ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಪ್ರಾಣಿಗಳ ಒಂದು ಕಾರಣದಿಂದ ಮಾತ್ರ ಈ ಶಿಶುಹತ್ಯೆಯಾಗಿದೆ ಎಂದು ಹೇಳಿದರು. ಅದನ್ನು ನಾನು ಅಲ್ಲಗಳೆಯುದಕ್ಕೆ ಹೋಗುವುದಿಲ್ಲ. ಯಾವ ಒಂದು ನಿಗೂಢವಾದ ಶಿಶುಹತ್ಯೆಯಾಗಿದೆ ಅದು ಸಂಪೂರ್ಣವಾಗಿ ಸಾಬೀತಾಗಿದೆ ಎಂದು ಹೇಳತಕ್ಕದ್ದು ನಮಗೆ ನಂಬಲಿಕ್ಕೆ ಆಗುವುದಿಲ್ಲ. ಅದರ ಬಗ್ಗೆ ಇನ್ನೂ ಸಂಶೋಧನೆ ಮಾಡಬೇಕು.

ಸನ್ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ ಮೇಲೆ, ಯಾರು ತನಿಖೆ ಮಾಡುತ್ತಾರೆ, ಅವರು ಮುಕ್ತ ಮನಸ್ಸಿನಲ್ಲಿ ತನಿಖೆಗೆ ಹೊರಡಬೇಕಾಗುತ್ತದೆ. ಕೆಲವು ಪೂರ್ವಗ್ರಹಪೀಡಿತ ಭಾವನೆಯಿಂದ ಹೋದರೆ ಮುಕ್ತ ಮನಸ್ಸಿನಿಂದ ತನಿಖೆಯಾಗುವುದಿಲ್ಲ. ಮೊನ್ನೆ ವಿಚಾರ ಜನ ಜಾಗ್ರತಿ ಬಂದಮೇಲೆ ಹೆಜ್ಜೆ ಗುರುತು ಮತ್ತೊಂದು ದಾಖಲೆ ಮಾಡಿದ್ದಾರೆ. ಪುನಃ ನಾನು ಇದರ ಬಗ್ಗೆ ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಅಲ್ಲಿ ನಡೆದಿರತಕ್ಕ ವಿಚಾರಗಳ ಬಗ್ಗೆ ಕೆಲವು ಗುರುತು ಹೇಳಿದ್ದಾರೆ. ಇದು ಏಪ್ರಿಲ್ ತಿಂಗಳಿಂದ ನಡೆದ ಮೇಲೆ ಅಲ್ಲಿಗೆ ಪೋಲೀಸ್ ನಾಯಿಗಳನ್ನು ಕಳುಹಿಸಿದ್ದಾರೆ. ಆ ಪೋಲೀಸ್ ನಾಯಿಗಳು ಏನು ಗುರುತ ಮಾಡಿಕೊಟ್ಟವು ? ಹಿಂದೆ ಕಾಲು, ತಲೆ ಸಿಕ್ಕಿದ್ದನ್ನು ಫೊರ್ಯಾನ್ಸಿಕ್ ಲ್ಯಾಬೊರೇಟರಿಗೆ ಕಳುಹಿಸಿದ್ದರ ವರದಿ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೂ ಬಂದಿಲ್ಲ, ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ತಾವು ತರಿಸಬೇಕು. ತೆಂಗಿನಕಾಯಿ ಸುಲಿದ ನಾರು ಇದ್ದುದರ ಬಗ್ಗೆ ಮತ್ತು ಕಾಲು ಸಿಕ್ಕಿದ್ದರ ಬಗ್ಗೆ ಸಾರ್ವಜನಿಕರಿಂದ ವಿಚಾರ ತಿಳಿದುಬಂದಿದೆ. ಒಂದೂವರೆ ಅಡಿ ಆಳದಲ್ಲಿ ಕಾಲನ್ನು ಹೂತಿಟ್ಟದ್ದರ ಬಗ್ಗೆ ಹೇಳಿದ್ದಾರೆ. ಇದು ಪ್ರಾಣಿ ಮಾಡಲಿಕ್ಕೆ ಸಾಧ್ಯವೇ ? ಸಾಮಾನ್ಯವಾಗಿ ಪ್ರಾಣಿಗಳು ಗುರುತು ಕಂಡುಹಿಡಿಯಬಹುದು. ಅದು ಏನಾದರೂ ಕುತ್ತಿಗೆಗೆ ಕಚ್ಚಿದ್ದು ಗಾಯ ಮಾಡಿದ್ದರೆ, ಪ್ರಾಣಿ ಎಂಜಲು, ಮನುಷ್ಯರ ಎಂಜಲು ಗುರುತು ಮಾಡಲಿಕ್ಕೆ ಸಾಧ್ಯವಿದೆ. ಪೋಲೀಸರು ಇದನ್ನು ಗುರುತು ಹಚ್ಚಿ ಫೊರ್ಯಾನಿಕ್ಸ್ ಲ್ಯಾಬೊರೇಟರಿಗೆ ಕಳುಹಿಸಿದ್ದಾರೆಯೋ ? ಇನ್ನು ವಸ್ತ್ರದ ವಿಚಾರದಲ್ಲಿ ಹೇಳಬೇಕೆಂದರೆ, ಮನುಷ್ಯ ವಸ್ತ್ರ ತೆಗೆಯುವುದು ಇದ್ದರೆ ಅದು ಅಡಿಮೇಲಾಗುತ್ತದೆ ಅದೇ ಪ್ರಾಣಿ ತೆಗೆದರೆ ಅದು ಆ ರೀತಿ ಇರುವುದಿಲ್ಲ. ಈಗ ಮೂರು ಮಕ್ಕಳದ್ದು ಯಾವ ರೀತಿಯಾಗಿದೆ ಎನ್ನುವುದನ್ನು ಪರಿಶೀಲಿಸಬೇಕು. ಸಾರ್ವಜನಿಕರ ಗಮನಕ್ಕೆ ತಿಳಿದ ಪ್ರಕಾರ ಆ ಬಟ್ಟೆಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಆ ಬಟ್ಟೆಗಳನ್ನು ಮಡಚಿದ್ದು ಮಡಿಕೆ ಸಿಕ್ಕಿದೆಯೋ ? ಈ ಅಂಶಗಳನ್ನು ನಾವು ಗಮನಿಸಿದರೆ, ಇದರಲ್ಲಿ ಮನುಷ್ಯರ ಕೈವಾಡ ಇರಬಹುದು ಎಂದು ಅನುಮಾನ ಬರುತ್ತದೆ. ಈ ಘಟನೆಗಳನ್ನು ನೋಡಿದರೆ ಅನುಮಾನ ಬರಲಿಕ್ಕೆ ಸಾಧ್ಯವಿದೆ. ಆದ್ದರಿಂದ, ಇದರ ಬಗ್ಗೆ ಗೂಢವಾಗಿ, ಸೂಕ್ಷ್ಮವಾಗಿ ವಿಚಾರಣೆ ಮಾಡಬೇಕು. ಇದರ ಬಗ್ಗೆ ವಿಚಾರಣೆ ನಾಲ್ಕು ತಿಂಗಳಿಂದ ನಿಧಾನವಾಗಿ ನಡೆದುಕೊಂಡು ಬಂದಿದೆ. ಆದ್ದರಿಂದ, ಇದರ ಬಗ್ಗೆ ಚುರುಕಿನಿಂದ ಸಂಶೋಧನೆ ನಡೆಸಬೇಕೆಂದು ಹೇಳಿ, ಹಿಂದೆ ಆಗಿರುವುದಕ್ಕೆ ಸಮರ್ಪಕವಾದ ಉತ್ತರ ಕೊಟ್ಟಿಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅವರು ಏನು ಸೂಚನೆ ಕೊಟ್ಟಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ವಿಚಾರಗಳನ್ನು ನೋಡಿದರೆ ಮಂತ್ರವಾದಿಗಳ ಕೈವಾಡದಂತೆ ಇದೆ ಎಂದು ತಿಳಿಯಬಹುದಾಗಿದೆ. ದೇವಿ ವಶ ಮಾಡಿಕೊಳ್ಳತಕ್ಕವರು ಈರೀತಿ ಕೊಲೆ ಮಾಡತಕ್ಕ ಸಾಧ್ಯತೆ ಇದೆ. ಮಕ್ಕಳ ಕತ್ತು ಕತ್ತರಿಸುವುದು, ಕರಳು ಕೀಳುವಂಥಾದ್ದು ಇವುಗಳನ್ನು ಮಂತ್ರಗಾರರೇ ಹುಲಿ ಉಗುರು ಹಾಕಿಕೊಂಡು ಕೀಳಲಿಕ್ಕೆ ಸಾಧ್ಯ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದು ಪ್ರಾಣಿಯಿಂದಲೇ ಆಗಿದೆ ಎನ್ನುವ ನಿಖರವಾದ ತೀರ್ಮಾನಕ್ಕೆ ಬಂದಿದ್ದೀರಿ ಏನು ? ತಾವು ವರದಿ ಪ್ರಕಾರ ಹೇಳಿದ್ದೀರಿ. ದೇವಿಗೆ ಬಲಿ ಕೊಡತಕ್ಕ ಪದ್ಧತಿ ಇಟ್ಟುಕೊಂಡಿರುವವರು ಹುಲಿ ಉಗುರು ಹಾಕಿಕೊಂಡು ಕೊಲೆ ಮಾಡಲಿಕ್ಕೆ ಬರುತ್ತದೆ. ಇಲ್ಲಿ ಮನುಷ್ಯರು ಬಿಟ್ಟು ಈ ಘಟನೆ ಆಗಿದೆ ಎಂದು ಇಟ್ಟುಕೊಳ್ಳಬಾರದು. ಮನುಷ್ಯರೇ ಮಾಡಿದ್ದಾರೆಂಬ ದೃಷ್ಟಿಯಿಟ್ಟುಕೊಂಡು ತನಿಖೆ ಪ್ರಬಲವಾಗಿ ನಡೆಯಬೇಕು. ಇದರ ಬಗ್ಗೆ ವಿವರವಾದ ತನಿಖೆ ಅಗತ್ಯ ಇದೆ. ಅದು ಆಗುತ್ತದೆ ಎನ್ನುವ ಒಂದು ಭಾವನೆ ಇಟ್ಟುಕೊಳ್ಳುತ್ತೇನೆ.

ಅಧ್ಯಕ್ಷರು.—ಸಭೆಯು ಈಗ ಮುಕ್ತಾಯವಾಗಿದೆ. ಪುನಃ ಸೋಮವಾರ ೨೨ನೇ ಆಗಸ್ಟ್ ೧೯೮೩ ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಸಭೆ ಸೇರುವುದು.

(ಸಭೆಯು ಐದು ಗಂಟೆ ಐವತ್ತೆಂಟು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಸೋಮವಾರ ದಿನಾಂಕ ೨೨ನೇ ತಾರೀಖು ಆಗಸ್ಟ್ ೧೯೮೩ ರಂದು ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)